# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 296 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 04.06.2025 • ಬುಧವಾರ • ಪುಟ:04 • ಬೆಲೆ:2

Volume:02 • Issue: 296 • PRGI No:KARKAN/2023/88055 • VIJAYANAGARA • 04.06.2025 • Wednesday • Page:04 • Rs:2











ಹಂಪಿ ಟೈಮ್ಸ್
ಸುದ್ದಿ–ಜಾಹೀರಾತಿಗಾಗಿ
ಸಂಪರ್ಕಿಸಿ:
ಕಚೇರಿ ವಿಳಾಸ:
ವಾಲ್ಮೀಕಿ ಸರ್ಕಲ್ ಹತ್ತಿರ, ಬಂಬೂ ಬಜಾರ್, ಹೊಸಪೇಟೆ–583201
ವಿಜಯನಗರ ಜಿಲ್ಲೆ
ಮೊ: 9448633038
hampitimes@gmail.com
visit for Daily updates
epaper.hampitimes.com


### ಆನಂದ ಬಾಣ




ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ನಿರ್ದೇಶನ

# ಮುಂಗಾರು ಮಳೆ ಆರಂಭ ಹಾನಿ ತಡೆಗೆ ಕ್ರಮವಹಿಸಿ




■ **ಹಂಪಿ ಟೈಮ್ಸ್ ಬಳ್ಳಾರಿ**

ಮುಂಗಾರು ಮಳೆ ಆರಂಭಗೊಂಡಿರುವ ಹಿನ್ನಲೆಯಲ್ಲಿ ಮಳೆಯಿಂದಾಗುವ ಹಾನಿ ತಡೆಗೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರಾಜ್ಯ ಹವಾಮಾನ ಇಲಾಖೆಯ ಮಾಹಿತಿಯನ್ವಯ ಈ ಬಾರಿ ಹೆಚ್ಚು ಮಳೆಯಾಗುವ ಸಂಭವವಿರುವುದರಿಂದ ಮುಂದಾಗಬಹುದಾದ ಸಂಭವನೀಯ ಪ್ರವಾಹ, ಪ್ರಾಣ ಹಾನಿ, ಬೆಳೆ, ಮನೆ ಹಾನಿ ತಡೆಗಟ್ಟಲು ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಎಲ್ಲಾ ತಾಲ್ಲೂಕು ತಹಶೀಲ್ದಾರರು, ಅಗತ್ಯ ಸಿದ್ಧತೆಗಳನ್ನು ಕೈಗೊಂಡು ಸಮರ್ಥವಾಗಿ ನಿರ್ವಹಿಸಬೇಕು ಎಂದರು.

ನದಿ ಪಾತ್ರದ ಗ್ರಾಮಗಳ ಕಡೆ ಹೆಚ್ಚಿನ ಮುಂಜಾಗ್ರತೆ ವಹಿಸಬೇಕು. ಸಂಭವನೀಯ ನೀರು ಮುಳುಗಡೆಯಾಗುವ ಗ್ರಾಮಗಳನ್ನು ಗುರುತಿಸಬೇಕು. ಕಂಪ್ಲಿ ಮತ್ತು ಸಿರುಗುಪ್ಪ ತಾಲ್ಲೂಕು ಭಾಗದಲ್ಲಿ ಹೆಚ್ಚು ಜಾಗೃತಿ ನೀಡಬೇಕು. ಕುರುಗೋಡು ಭಾಗದ ಸಿದ್ದಮ್ಮನಹಳ್ಳಿ ಗ್ರಾಮದಲ್ಲಿ ಹೆಚ್ಚಾಗಿ ಮಳೆ ಸುರಿದರೆ, ನಡು ಗ್ರಾಮದ ಸೇತುವೆ ಮುಳುಗಡೆಯಾಗಲಿದ್ದು, ಈ ಕುರಿತು ಎಚ್ಚರಿಕೆ ನೀಡಬೇಕು. ಅದೇರೀತಿಯಾಗಿ ಬಳ್ಳಾರಿ ತಾಲ್ಲೂಕು ಭಾಗದ ಕೆಲ ಗ್ರಾಮಗಳಲ್ಲಿಯೂ ಸಹ ಸಾರ್ವಜನಿಕರಿಗೆ ಎಚ್ಚರಿಕೆ ನೀಡಬೇಕು ಎಂದು ತಿಳಿಸಿದರು.

ಅಪಾಯ ತಲೆದೋರಬಹುದಾದ ಗ್ರಾಮಗಳನ್ನು ಗುರುತಿಸಿ ಮುನ್ನೆಚ್ಚರಿಕೆ ನೀಡಬೇಕು. ಅಲ್ಲಿನ ಮಕ್ಕಳು, ವಯಸ್ಕರು, ಜಾನುವಾರುಗಳನ್ನು ಆಯಾ ಗ್ರಾಮಾಡಳಿತಾಧಿಕಾರಿಗಳ ಸಹಯೋಗದೊಂದಿಗೆ ಗಣತಿ ಮಾಡಿಕೊಂಡು ಇಟ್ಟುಕೊಂಡಿರಬೇಕು ಎಂದು ತಹಶೀಲ್ದಾರರುಗಳಿಗೆ ನಿರ್ದೇಶನ ನೀಡಿದರು.

ಕಾಳಜಿ ಕೇಂದ್ರಗಳನ್ನು ತೆರೆಯಲು ಸ್ಥಳ ಗುರುತಿಸುವುದು, ಇತರೆ ಪೂರಕ ದಾಸ್ತಾನು ಸಜ್ಜುಮಾಡಿಕೊಳ್ಳಬೇಕು. ಔಷಧಿ ದಾಸ್ತಾನು ಇಟ್ಟುಕೊಳ್ಳಬೇಕು. ಈ ಕುರಿತು ತಾಲ್ಲೂಕು ವೈದ್ಯಾಧಿಕಾರಿಗಳ ಜೊತೆ ತಹಶೀಲ್ದಾರರು ಸಂಪರ್ಕದಲ್ಲಿರಬೇಕು. ಪ್ರವಾಹ ಪರಿಸ್ಥಿತಿ ಉದ್ಭವಿಸಿದರೆ ಜನ–ಜಾನುವಾರುಗಳಿಗೆ ಸುರಕ್ಷಿತ ಸ್ಥಳಗಳಿಗೆ ಸಾಗಿಸಲು ಬೇಕಾದ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದರು.

ಅತಿಹೆಚ್ಚು ಮಳೆಯಿಂದಾಗಿ ರಸ್ತೆಗಳಲ್ಲಿ ಮರ ಮತ್ತು ವಿದ್ಯುತ್ ಕಂಬಗಳು ಬೀಳುವುದು ಕಳೆದ ತಿಂಗಳಿನಲ್ಲಾದ ಮಳೆಯಿಂದ ಕಂಡುಬಂದಿದ್ದು, ಅಂತಹ ಮಹಾನಗರ ಪಾಲಿಕೆ, >>4

# ಪಂಚಮಸಾಲಿ ಜಿಲ್ಲಾ ಯುವ ಘಟಕಕ್ಕೆ ಪದಾಧಿಕಾರಿಗಳ ಆಯ್ಕೆ

## ಬಿ.ಎಂ.ಎಸ್.ಮಂಜುನಾಥ(ಅಧ್ಯಕ್ಷ) ಜಿ.ಆರ್.ಸಿದ್ದೇಶ್ವರ ಪ್ರಧಾನ ಕಾರ್ಯದರ್ಶಿ



■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘ(ರಿ) ಬೆಂಗಳೂರು ಮಂಗಳವಾರ ನಗರದ ಪ್ರವಾಸಿ ಮಂದಿರದಲ್ಲಿ ಯುವ ಘಟಕ ರಾಜ್ಯಾಧ್ಯಕ್ಷ ಕಿಚಡಿ ಕೊಟ್ರೇಶ್ ಅವರ ಅಧ್ಯಕ್ಷತೆಯಲ್ಲಿ ವಿಜಯನಗರ ಜಿಲ್ಲಾ ಯುವ ಘಟಕದ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು.

ಈ ಸಭೆಯಲ್ಲಿ ಗೌರವ ಅಧ್ಯಕ್ಷರಾಗಿ ಬಣಕಾರ ಮೂಗಪ್ಪ, ಅಧ್ಯಕ್ಷರಾಗಿ ಬಿ.ಎಂ.ಎಸ್.ಮಂಜುನಾಥ, ಪ್ರಧಾನ ಕಾರ್ಯದರ್ಶಿಯಾಗಿ ಜಿ.ಆರ್.ಸಿದ್ದೇಶ್ವರ, ಉಪಾಧ್ಯಕ್ಷರಾಗಿ ವೀರೇಶ್ ಗೌಡ ಸಿದ್ದನಗೌಡ್ರು, ಕೆ.ಬಸವರಾಜ್, ಎ.ಜಿ. ಪತ್ರೆಬಸವನಗೌಡ, ಶಿವಕುಮಾರ್ ಗಡಿಗಿ, ಸಂಘಟನಾ ಕಾರ್ಯದರ್ಶಿಗಳಾಗಿ ಮಲ್ಲಿಕಾರ್ಜುನ ಬಣಕಾರ, ಶಿವಕುಮಾರ್ ಗೌಡ, ಕೆ.ವೀರಬಸವ, ಕೋಶಾಧ್ಯಕ್ಷರಾಗಿ ಎ.ಬಿ.ಅಜಯ್ ಹಾಗೂ ಜಿಲ್ಲಾ ಕಾರ್ಯಕಾರಣಿ ಸದಸ್ಯರಾಗಿ ಜಿ.ಅಭಿಶೇಕ್, ಎಂ.ರಾಜ ಶೇಖರ್, ಕೆ.ಬಸವನಗೌಡ, ಬತ್ತನಹಳ್ಳಿ ಬಸವರಾಜ್, ಗಿರೀಶ್ ಪೂಜಾರ್, ಉಮೆಶ್ ಅಮ್ಮಿನಕೆರೆ, ಎನ್.ಬಿ. ರವಿಕುಮಾರ್, ಎ.ವಿನಾಯಕ ಆಯ್ಕೆ ಮಾಡಿ ಆದೇಶ ಹೊರಡಿಸಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಸಂಚಾಲಕ ಬಣವಿಕಲ್ಲು ಮಂಜುನಾಥ, ಹೊಸಪೇಟೆ ತಾಲೂಕು ಯುವ ಘಕಟ ಅಧ್ಯಕ್ಷ ಎಚ್.ವೀರೇಶ್ ಅವಳಿ, ಪ್ರಧಾನ ಕಾರ್ಯದರ್ಶಿ ವಿಶ್ವನಾಥ ಗೌಡ ಇದ್ದರು.

### ಮೈಕ್ರೋ ನ್ಯೂಸ್

## ತುಂಗಭದ್ರಾ ನದಿ, ಜಲಾಶಯದಲ್ಲಿ ಮೀನುಗಾರಿಕೆ ನಿಷೇಧ

**ಹಂಪಿ ಟೈಮ್ಸ್ ಕೊಪ್ಪಳ**

2025–26ನೇ ಸಾಲಿನ ಜೂನ್ 01 ರಿಂದ ಜುಲೈ 31 ರವರೆಗೆ ಮೀನುಗಾರಿಕೆ ನಿಷೇಧಿತ ಅವಧಿ ಇರುವುದರಿಂದ ತುಂಗಭದ್ರಾ ನದಿಭಾಗ ಹಾಗೂ ಜಲಾಶಯದಲ್ಲಿ ಯಾವುದೇ ತರಹದ ಮೀನುಗಾರಿಕೆ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ. ಜಿಲ್ಲೆಯ ಕೊಪ್ಪಳ, ಕುಕನೂರು ಹಾಗೂ ಯಲಬುರ್ಗಾ ತಾಲ್ಲೂಕುಗಳ ಮೀನುಗಾರರು ತುಂಗಭದ್ರಾ ನದಿಭಾಗ ಹಾಗೂ ಜಲಾಶಯದಲ್ಲಿ ಯಾವುದೇ ರೀತಿಯ ಮೀನುಗಾರಿಕೆ ಚಟುವಟಿಕೆಯಲ್ಲಿ ತೊಡಗಬಾರದು ಎಂದು ಕೊಪ್ಪಳ ಮೀನುಗಾರಿಕೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.


# ಜೂ.06 ರಂದು ವಾಕ್ ಇನ್ ಇಂಟರ್‌ವ್ಯೂವ್

■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಕೊಪ್ಪಳದಲ್ಲಿ ಜೂನ್ 06 ರಂದು ವಾಕ್ ಇನ್ ಇಂಟರ್‌ವ್ಯೂವ್ ಅನ್ನು ಆಯೋಜಿಸಲಾಗಿದ್ದು, ಖಾಸಗಿ ಸಂಸ್ಥೆಗಳು ಖಾಲಿ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ.ಉಚಿತ ಪ್ರವೇಶವಿರುತ್ತದೆ.

ಬಿ.ಇ.–ಇ&ಇ, ಬಿ.ಇ.–ಇ&ಸಿ, ಡಿಪ್ಲೊಮಾ ಇನ್ ಟೂಲ್ & ಡೈ ಮೇಕಿಂಗ್+ಬಿ.ಇ–ಮೆಕ್ಯಾನಿಕಲ್ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಗೆಸ್ಟ್ ಲೆಕ್ಚರರ್ ಆಗಿ ಕೆಲಸ ಮಾಡಲು ಇಚ್ಛಿಸುವವರು ಜೂನ್ 06 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ರವರೆಗೆ ನಡೆಯಲಿರುವ ವಾಕ್ ಇನ್ ಇಂಟರ್ ವ್ಯೂವ್‌ನಲ್ಲಿ ಭಾಗವಹಿಸಬಹುದು.

ಅರ್ಹ ವಿದ್ಯಾರ್ಹತೆ ಹೊಂದಿದ ನಿರುದ್ಯೋಗಿ ಯುವಕ ಮತ್ತು ಯುವತಿಯರು ದೃಢೀಕರಿಸಲಾದ ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳು ಮತ್ತು ಆಧಾರ್ ಕಾರ್ಡಿನ ಪ್ರತಿ, ಬಯೋಡಾಟಾ ಹಾಗೂ ಪಾಸ್ ಪೋರ್ಟ್ ಅಳತೆಯ 2 ಭಾವಚಿತ್ರಗಳೊಂದಿಗೆ ವಾಕ್ ಇನ್ ಇಂಟರ್‌ವ್ಯೂವ್‌ನಲ್ಲಿ ಭಾಗವಹಿಸಿ, ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಕೊಪ್ಪಳ ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಅಧಿಕಾರಿಗಳ ಕಣ್ಣಿಗೆ ರಸ್ತೆಗಳಲ್ಲಿನ ಗುಂಡಿ ಕಾಣಲ್ವೆ?

## ಶಾಸಕ ಡಾ.ಎನ್.ಟಿ.ಶ್ರೀನಿವಾಸ ಗರಂ | ಲೋಕೋಪಯೋಗಿ ಇಲಾಖೆ ಪ್ರಗತಿ ಪರಿಶೀಲನ ಸಭೆ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಕೋಟ್ಯಂತರ ರೂಪಾಯಿಗಳ ಅನುದಾನ ಒದಗಿಸಿದರು ರಸ್ತೆಗಳು ಮಾತ್ರ ಸುಧಾರಣೆ ಕಾಣುತ್ತಿಲ್ಲ ಅಧಿಕಾರಿಗಳು ಎಚ್ಚರ ವಹಿಸಿ ಕರ್ತವ್ಯ ನಿರ್ವಹಿಸಲು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಸೂಚನೆ ನೀಡಿದರು.

ಪಟ್ಟಣದ ಲೋಕೋಪಯೋಗಿ ಇಲಾಖೆ ಕಚೇರಿಯಲ್ಲಿ ಮಂಗಳವಾರ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು, ಮಳೆಗಾಲ ಆರಂಭವಾಗಿದ್ದು ರಸ್ತೆಗಳಲ್ಲಿ ತಗ್ಗು, ಗುಂಡಿಗಳು ಇವೆ, ಇದರಿಂದ ವಾಹನ ಸವಾರರು ಪ್ರಾಣವನ್ನೇ ಕಳೆದುಕೊಂಡು ಕುಟುಂಬ ಬೀದಿಗೆ ಬೀಳುವಂತಾಗುತ್ತದೆ. ಆದ್ದರಿಂದ ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಿ ಕೆಲಸ ಮಾಡಲು ಸೂಚನೆ ನೀಡಿದರು. ಕ್ಷೇತ್ರದಲ್ಲಿ ಈಗಾಗಲೇ ಬಹುತೇಕ ಅನುದಾನವನ್ನು ಉತ್ತಮ ರಸ್ತೆಗಳನ್ನು ನಿರ್ಮಾಣ ಮಾಡಲು ನೀಡಿದ್ದು, ಕೆಲವುಕಡೆ ರಸ್ತೆಯ ಮಧ್ಯದಲ್ಲಿ ತಗ್ಗು,ಗುಂಡಿಗಳಾಗಿದ್ದು, ಸಾರ್ವಜನಿಕರಿಗೆ ಸಂಚಾರ ಮಾಡಲು ಸಮಸ್ಯೆಯಾಗುತ್ತಿದ್ದೆ, ಆದರೂ ಅಧಿಕಾರಿಗಳು ತಮಗೆ ಸಂಭಂದಿಸಿಲ್ಲ ಎನ್ನುವ ರೀತಿ ಇದ್ದರೇ ಹೇಗೆ. ಅವುಗಳನ್ನು ರಿಪೇರಿ ಮಾಡಲು ಅನುದಾನ ಬೇಕಿದ್ದರೆ ಕೇಳಿ, ಸೂಕ್ತ ಅನುದಾನ ನೀಡಲು ಸಹಕರಿಸುವೆ. ಇನ್ನೂ ಮಳೆಗಾಲದಲ್ಲಿ ರಸ್ತೆಗಳ ಇಕ್ಕೆಲಗಳಲ್ಲಿ ಗಿಡ, ಮರಗಳು ಬೆಳೆದಿವೆ ಇದರಿಂದ ತಿರುವುಗಳಲ್ಲಿ ಎದುರಿಗೆ ಬರುವ ವಾಹನಗಳು ಕಾಣದೆ ಅಪಘಾತಗಳು ಆಗುತ್ತಿವೆ. ಈ ಬಗ್ಗೆ ಅನೇಕ ದೂರುಗಳು ಬಂದಿವೆ, ಅಧಿಕಾರಿಗಳು ಮೌನವಹಿಸಿದರೆ ಹೇಗೆ? ಇರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ನನ್ನ ಸಹಕಾರ ಯಾವಗಲೂ ಇದೆ ಎಂದು ಮನವರಿಕೆ ಮಾಡಿದರು. ಈಗಾಗಲೇ ಇಲಾಖೆಗೆ ಅತೀ ಹೆಚ್ಚು ಕಾಮಗಾರಿಗಳನ್ನು ನೀಡಿದ್ದು, ಶ್ರಮವಹಿಸಿ, ಗುಣಮಟ್ಟದ ಕೆಲಸಕ್ಕೆ ಆದ್ಯತೆ ನೀಡಿ, ರಸ್ತೆಗಳು ಸುಧಾರಣೆಗಳು ಆಗಬೇಕು ಅದಕೆ ಪೂರಕವಾಗಿ ಬೇಕಾದ ಅನುದಾನ ಒದಗಿಸಲು ಸಿದ್ದ ಎಂದು ಸಭೆಯಲ್ಲಿ ತಿಳಿಸಿದರು. ನಂತರ ಅರಣ್ಯ ಇಲಾಖೆಗೆ ತೆರಳಿ ಅಲ್ಲಿ ಇರುವ ಸಮಸ್ಯೆ ಹಾಗೂ ಪರಿಹಾರಕ್ಕೆ ಬೇಕಾದ ಕ್ರಮಗಳ ಕುರಿತು ಚರ್ಚೆ ನಡೆಸಿದರು. ಲೋಕೋಪಯೋಗಿ ಇಲಾಖೆ ಇಇ ದೇವದಾಸ್, ಎಇಇ ಕೆ.ನಾಗನಗೌಡ ಸೇರಿದಂತೆ ಹಿರಿಯ ಸಹಾಯಕ ಇಂಜಿನೀಯರ್ ಇದ್ದರು.

# ಸಂವಿಧಾನ ಜಾರಿಯಾಗಿ 75 ವರ್ಷವಾದರೂ ಸಂಪೂರ್ಣ ಶಿಕ್ಷಣ ಸಾಧ್ಯವಾಗಿಲ್ಲ: ಸಿ.ಎಂ



■ ಹಂಪಿ ಟೈಮ್ಸ್ ಗದಗ

ಅಂಬೇಡ್ಕರ್ ಅವರು ಕೊಟ್ಟಿರುವ ಶಿಕ್ಷಣ–ಸಂಘಟನೆ–ಹೋರಾಟ ಎನ್ನುವ ಮಂತ್ರವನ್ನು ಎಲ್ಲರೂ ಪಾಲಿಸಿಬೇಕು.

ಸಂವಿಧಾನ ಜಾರಿಯಾಗಿ 75 ವರ್ಷವಾದರೂ ಸಂಪೂರ್ಣ ಶಿಕ್ಷಣ ಸಾಧ್ಯವಾಗಿಲ್ಲ ಎಂದು ಸಿ.ಎಂ ಸಿದ್ದರಾಮಯ್ಯ ತಿಳಿಸಿದರು.

ಗದಗದ ಕರ್ನಾಟಕ ಕುರುಬರ ಸಂಘ ಆಯೋಜಿಸಿದ್ದ ಕರ್ನಾಟಕ ಕುರುಬರ ಸಹಕಾರ ಪತ್ತಿನ ಸಂಘದ ಶತಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ನೂರು ವರ್ಷಗಳ ಹಿಂದೆಯೇ ಕುರುಬ ಸಮಾಜವನ್ನು ಸಂಘಟಿಸಿ ಸಹಕಾರ ಸಂಘ ಸ್ಥಾಪಿಸಿದ್ದು ಅತ್ಯಂತ ಮುಂದಾಲೋಚನೆಯ ಸಾಮಾಜಿಕ ನ್ಯಾಯದ ಕಾರ್ಯ ಎಂದರು.

**ಸಂವಿಧಾನ ಜಾರಿಗೆ ಮೊದಲೇ ಕುರುಬರ ಪತ್ತಿನ ಸಹಕಾರ ಸಂಘ ಸ್ಥಾಪಿಸಿದ್ದು ಸಂಸ್ಥಾಪಕರ ಮುಂದಾಲೋಚನೆಯ ಕ್ರಮಕ್ಕೆ ಸಿಎಂ ಮೆಚ್ಚುಗೆ**
**ಅಂಬೇಡ್ಕರ್ ಅವರ ಶಿಕ್ಷಣ–ಸಂಘಟನೆ–ಹೋರಾಟ ಎನ್ನುವುದನ್ನು ಪಾಲಿಸಿ**
**ಶಿಕ್ಷಣ–ಆರೋಗ್ಯ–ಅನ್ನಕ್ಕೆ ನಮ್ಮ ಸರ್ಕಾರದ ಪ್ರಮುಖ ಆಧ್ಯತೆ**

ಶಿಕ್ಷಣ–ಸಂಘಟನೆ–ಹೋರಾಟ ಅಂಬೇಡ್ಕರ್ ಅವರು ದೇಶದ ಹಿಂದುಳಿದವರಿಗೆ ಕೊಟ್ಟಿರುವ ಮಂತ್ರ. ಆದರೆ, ಸಂವಿಧಾನ ಜಾರಿಗೆ ಮೊದಲೇ ಮುಂದಾಲೋಚನೆಯಿಂದ ಪತ್ತಿನ ಸಹಕಾರ ಸಂಘ ಸ್ಥಾಪಿಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯ ಎಂದರು.



ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಶೂದ್ರ ವರ್ಗದ ಜನ ಹಿಂದುಳಿಯಲು ಅವರು ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದೇ ಪ್ರಮುಖ ಕಾರಣ. ಶೂದ್ರರು, ದಲಿತರು ಮಾತ್ರ ಶಿಕ್ಷಣ ಪಡೆಯುವಂತಿರಲಿಲ್ಲ . ಅಂಬೇಡ್ಕರ್ ಅವರ ಜೀವಮಾನದ ಹೋರಾಟವೇ ಈ ಅಸಮಾನತೆಯನ್ನು ಅಳಿಸುವುದಾಗಿತ್ತು. ಇದಕ್ಕೆ ಶಿಕ್ಷಣವೇ ಪ್ರಮುಖ ಅಸ್ತ್ರ ಎಂದು ಅಂಬೇಡ್ಕರ್ ಮನಗಂಡಿದ್ದರು.

ಶಿಕ್ಷಣ ದೊರಕದಿದ್ದರೆ ಸ್ವಾಭಿಮಾನಿಗಳಾಗಿ ಇರಲು ಸಾಧ್ಯವೇ ಇಲ್ಲ. ನನಗೆ ರಾಜಪ್ಪ ಎನ್ನುವ ಶಿಕ್ಷಕರು ಸಿಗದೇ ಹೋಗಿದ್ದರೆ ನನಗೆ ಶಿಕ್ಷಣವೂ ಸಿಗುತ್ತಿರಲಿಲ್ಲ, ನಾನು ಮುಖ್ಯಮಂತ್ರಿಯೂ ಆಗುತ್ತಿರಲಿಲ್ಲ. ಹಸು ಕಾಯ್ಕೊಂಡು ಇರಬೇಕಾಗಿತ್ತು. ಅದಕ್ಕೇ ನಮ್ಮ ಸರ್ಕಾರ ಶಿಕ್ಷಣ–ಆರೋಗ್ಯ–ಅನ್ನಕ್ಕೆ ಪ್ರಮುಖ ಆಧ್ಯತೆ ನೀಡುತ್ತಿದೆ. ಅಂಬೇಡ್ಕರ್, ಬಸವಣ್ಣ, ಮಹಾತ್ಮ ಗಾಂಧಿಯವರ ಆಶಯಗಳು ಈಡೇರಬೇಕಾದರೆ ಸರ್ವರಿಗೂ ಶಿಕ್ಷಣ ಸಿಗಬೇಕು. ಎಲ್ಲರಿಗೂ ಆರ್ಥಿಕ ಶಕ್ತಿ ಬರಬೇಕು ಎಂದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.**
**ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ವೈಜ್ಞಾನಿಕ ಯುಗದಲ್ಲೂ ಅವೈಜ್ಞಾನಿಕ ಬದುಕು

## ವಾಸಕ್ಕೆ ಯೋಗ್ಯವಲ್ಲದ ನೀರು ನುಗ್ಗುವ ಸ್ಥಳಗಳಲ್ಲಿ ಜನವಸತಿ | ಪ್ರಕೃತಿ ಮುನಿಸಿನಿಂದ ಬದುಕು ಸರ್ವನಾಶ

## ಇನ್ನಾದರೂ ಸರ್ಕಾರಗಳು ಎಚ್ಚೆತ್ತುಕೊಳ್ಳಬೇಕಿದೆ | ಸರ್ವೆ ಆಧರಿಸಿ ಜನವಸತಿ ಸ್ಥಳ ಗುರುತಿಸುವಂತಾಗಲಿ



ಬಿಸಿಲಿನ ತಾಪಮಾನ ಏರಿಕೆ, ಜನರ ಸಾವಿನ ಮಟ್ಟ ಹೆಚ್ಚುತ್ತಿದೆ, ಪರಿಸರ ಮಾಲಿನ್ಯ ದಿನದಿಂದ ದಿನಕ್ಕೆ ವೃದ್ಧಿಯಾಗುತ್ತಿದೆ. ಅಕಾಲಿಕ ಮಳೆ ಧಾರಕಾರವಾಗಿ ಸುರಿಯುತ್ತಿದೆ. ಕೈಗಾರಿಕೆಗಳು, ವಾಹನಗಳು ಹೊಸ ರೂಪವನ್ನು ಪಡೆದುಕೊಂಡು ವಿಕಾಸವಾಗುತ್ತಿವೆ ಅಂಬೋದೆಲ್ಲ ನಮ್ಮ ತಿಳುವಳಿಕೆಯ ಮುಂದೆಯೇ ನಡೆಯುತ್ತಿದೆ. ಮನುಷ್ಯರಾದ ನಾವು ನಮ್ಮನ್ನು ಮತ್ತು ನಮ್ಮ ಪರಿಸರವನ್ನು ಆಧುನಿಕವಾಗಿಸಿಕೊಂಡು ಬದುಕುವುದಕ್ಕೆ ತುದಿಗಾಲಿನಲ್ಲಿ ನಿಂತಿದ್ದೇವೆ. ಬದುಕು ನಡೆಸುವುದಕ್ಕೆ ಹಣವೇ ಪ್ರಧಾನ ಅನ್ನೋ ಪರಿಸರವೊಂದು ಈಗ ರೂಪು ಪಡೆದಿದೆ. ಅದರ ಜೊತೆಯಲ್ಲಿ ವಿಭಿನ್ನ ತಿಳುವಳಿಕೆಯನ್ನು ಹೇಳುವ ಶಿಕ್ಷಣ, ಸಂಶೋಧನೆ, ಬರೆಹಗಳು ದಿನ ನಿತ್ಯ ಹುಟ್ಟಿಕೊಂಡು ನಮ್ಮ ಅರಿವಿನ ದಾರಿಯನ್ನು ವಿಸ್ತಾರ ಮಾಡುತ್ತಿವೆ. ಚಂದ್ರನ ಮೇಲೆ, ಗ್ರಹಗಳ ಮೈಗೆ ನಡೆದಿದ್ದೇವೆ. ದೇಹಕ್ಕೆ ರೋಗವನ್ನು ಹುಟ್ಟು ಹಾಕುವ ಹಾಗೂ ರೋಗವನ್ನು ಪತ್ತೆ ಹಚ್ಚುವ, ಅಂಗಾಂಗವನ್ನೇ ಕಸಿ ಮಾಡುವ, ಬಾಡಿಗೆ ತಾಯಿ ಹಾಗೂ ಟೆಸ್ಟ್‌ಟ್ಯೂಬ್ ಮೂಲಕ ಮಗುವ ಪಡೆಯುವಷ್ಟು ತಾಂತ್ರಿಕತೆಯನ್ನು ರೂಪಿಸಿದ್ದೇವೆ ಎನ್ನುವುದಕ್ಕಿಂತ ಪ್ರಕೃತಿಯಲ್ಲಿನ ಬಹುತೇಕ ವಸ್ತುಗಳ ಪ್ರತಿರೂಪವನ್ನು ರೂಪಿಸಿದ್ದೇವೆ ಎನ್ನವುದು ನಮ್ಮ ಸಾಧನೆ ಮತ್ತು ಹೆಮ್ಮೆಯ ಸಂಗತಿ. ಆದರೆ ನಾವು ನಮ್ಮ ಕುಟುಂಬ, ಸಂಬಂಧವನ್ನು ಬಿಗಿಯಾಗಿ ಹಿಡಿದುಕೊಳ್ಳುವಲ್ಲಿ, ನಮ್ಮ ಮನೆ, ಅಂಗಳ, ರಸ್ತೆ ಸುತ್ತಲಿನ ಪರಿಸರವನ್ನು ನಿರ್ವಹಿಸುವಲ್ಲಿ ಸೋತಿದ್ದೇವೆ ಅದೆಷ್ಟು ಅಂದರೆ ಪರಿಸರ ಅಂದರೆ ಏನು? ಅದು ಏನೆಲ್ಲ ಒಳಗೊಂಡಿದೆ ಅಂಬೋದೆ ನಮ್ಮ ತಿಳುವಳಿಕೆಯಲ್ಲಿ ಇಲ್ಲದಿರುವುದು ನಾಚಿಗೇಡಿನ ಸಂಗತಿಯಾಗಿದೆ.

ನೆಲದ ಮೇಲೆ ನಾವು ಮನೆಯನ್ನು ಕಟ್ಟಿದ್ದೇವೆ, ಅಂಗಡಿ–ಮಳಿಗೆಗಳು ಆಕಾಶಕ್ಕೆ ನಿಂತಿವೆ. ರಸ್ತೆಗಳು ಊರಿನಿಂದ ಊರಿಗೆ ಸಂಪರ್ಕ ಸಾಧಿಸಿದೆ. ಕರೆಂಟು, ಕೇಬಲ್, ನೀರು ಇತ್ಯಾದಿಗಳೆಲ್ಲ ರಸ್ತೆಯ ಪಕ್ಕದಲ್ಲಿ ನಡೆದಿವೆ. ಸೇತುವೆ, ಪಾರ್ಕ್, ಸಂಕಿರಣ, ಹೊಟೆಲ್ ಎಂಬೆಲ್ಲ ಆಧುನಿಕ ಸಂಗತಿಗಳು ನಮ್ಮ ಬದುಕಿನ ಜೊತೆಗೆ ಬೆಳವಣಿಗೆಯನ್ನು ಪಡೆದು ಹಳ್ಳಿಯಾದದ್ದು ಊರಾಗಿದೆ, ಊರು ಪಟ್ಟಣವಾಗಿ ನಗರವಾಗಿ ಮೈದುಂಬಿಕೊಂಡಿದೆ. ಇದರ ಜೊತೆಯಲ್ಲಿ ಬೇಸಿಗೆಯಲ್ಲಿ ಮನೆಯಿಂದ ಹೊರಕ್ಕೆ ನಡೆಯಲಾಗದಷ್ಟು ಧಗೆ ದೇಹವನ್ನು ಆವರಿಸುತ್ತಿದೆ. ನೀರಿನ ಅಭಾವ ಸಾಮಾನ್ಯವಾಗಿ ಕಾಡುವುದು ಇದೆ. ಮಳೆ ಶುರುವಾಯಿತು ಅಂದರೆ ಭೂಮಿ ತಂಪಾಯಿತು ಎನ್ನುವ ಭಾವಕ್ಕಿಂತ ಭಯ–ಆತಂಕವೇ ಹೆಚ್ಚು ಏಕೆಂದರೆ ರಸ್ತೆಗಳು ನೀರಿನಲ್ಲಿ ಕೊಚ್ಚಿ ಹೋಗುತ್ತವೆ, ಮನೆಗಳು, ಗುಡ್ಡಗಳು ಕುಸಿದು ಬೀಳುತ್ತದೆ. ಹೊಳೆಯೇ ಹರಿದಂತೆ ನೀರು ನಗರದ ನಡುವಿನ ರಸ್ತೆ–ಚರಂಡಿಯಲ್ಲಿ ಅಬ್ಬರಿಸಿ ಹರಿಯುವ ಜೊತೆಯಲ್ಲಿ ಮಣ್ಣು, ಕಲ್ಲು, ಇಟ್ಟಿಗೆ ಇತ್ಯಾದಿಗಳನೆಲ್ಲ ತಂದು ಸುರಿದು ಅಪಾಯವನ್ನು ಸೃಷ್ಟಿ ಮಾಡುತ್ತದೆ. ಮನುಷ್ಯರಾದ ನಾವು ಮತ್ತು ನಮ್ಮ ಜೊತೆಗೆ ಬದುಕು ಮಾಡುವ ಅನೇಕ ಪ್ರಾಣಿಗಳು ಸಾವು–ನೋವುಗಳನ್ನು ಕಾಣುವುದು ಸಹಜ ಎಂಬಂತೆ ಇದೆ.



ಡಾ. ಸುಬ್ರಹ್ಮಣ್ಯ ಸಿ ಕುಂದೂರು
ಮಂಗಳೂರು

Scan For Digital Colourful
HAMPI TIMES E-paper

ಈ ರೀತಿಯ ಅವಘಡಗಳಿಗೆ ಮನುಷ್ಯರಾದ ನಮ್ಮ ತಪ್ಪೆ? ಅಥವಾ ನಮ್ಮನ್ನು ಆವರಿಸಿದ ಪ್ರಕೃತಿಯ ತಪ್ಪೆ? ಎನ್ನುವುದನ್ನು ಯೋಚಿಸ ಬೇಕಾದ ಅಗತ್ಯತೆ ಉಂಟು. ನಾವುಗಳು ಮುಖ್ಯವಾಗಿ ಸಾಮಾಜಿಕ ಹೊಣೆಗಾರಿಕೆ ಯನ್ನು ಮರೆತಿದ್ದೇವೆ ಮತ್ತು ಬದುಕನ್ನು ಕಟ್ಟಿಕೊಳ್ಳುವಾಗ ಪ್ರಕೃತಿಯನ್ನು ಒಳಗೊಂಡು ನಡೆಯುವ ನಿರ್ವಹಣೆಯನ್ನು ಮರೆತು ಬಿಟ್ಟಿದ್ದೇವೆ ಎನ್ನುವುದಕ್ಕಿಂತ ನಮ್ಮೊಳಗೆ ಅದರ ತಿಳುವಳಿಕೆಯೇ ಶೂನ್ಯವಾಗಿರುವುದು ಆಧುನಿಕ ಜೀವನ ವಿನ್ಯಾಸದ ಫಲವಾಗಿದೆ. ಹರಪ್ಪದಂತಹ ಆದಿ ಕಾಲದ ಜನರ ನಾಗರೀಕತೆಯು ನಗರ, ಊರು, ಹಳ್ಳಿಯಲ್ಲಿ ಮನುಷ್ಯ ತನ್ನ ಬೌದ್ಧಿಕ ಸಂಸ್ಕೃತಿಯನ್ನು ನಿರ್ಮಾಣ ಮಾಡುವುದಕ್ಕೆ ಯೋಜನೆಗಳಿತ್ತು. ಹರಿಯುವ ನೀರಿಗೆ, ಮೇಯುವ ದನಕ್ಕೆ, ಬೀಸುವ ಗಾಳಿಗೆ, ಇತ್ಯಾದಿ ಪ್ರತಿಯೊಂದಕ್ಕೂ ವ್ಯವಸ್ಥೆಯನ್ನು ಇಟ್ಟುಕೊಂಡೆ ಮನುಷ್ಯನಾದವನು ಸಾಮ್ರಾಜ್ಯವನ್ನು ಕಟ್ಟಿದ್ದ. ಇಲ್ಲಿ ಪ್ರಕೃತಿಯೊಂದಿಗೆ ಬದುಕು ನಡೆಸುವ ಮ್ಯಾನೇಜ್ಮೆಂಟ್ ಇತ್ತು. ಇದು ಅನೇಕ ರಾಜರ ಕಾಲದಲ್ಲೂ ಅಸ್ಥಿತ್ವದಲ್ಲಿ ಇತ್ತು ಆದರೆ ಕಳೆದ ಆರೇಳು ದಶಕದಿಂದ ಈಚೆಗೆ ಅದ್ಯಾವುದು ಇಲ್ಲ ಎನ್ನುವುದು ವಾಸ್ತವ ಸತ್ಯವಾಗಿದೆ.

ಮಳೆ ಸುರಿಯುತ್ತಿದ್ದರು ನಮ್ಮ ಕೈಯಲ್ಲಿ ಕೊಡೆಯೊಂದನ್ನು ಹಿಡಿದಕೊಂಡು ಹೋಗಬೇಕು ಅನ್ನುವುದು ತಿಳಿಯುವುದಿಲ್ಲ. ನಮ್ಮ ಅಗತ್ಯವನ್ನು ಪೂರೈಕೆಯ ಭಾಗವಾಗಿ ಕೈಗೆ ಪಡೆದಿರುವ ಯಾವುದೇ ಪ್ಲಾಸ್ಟಿಕ್ ಚೀಲ, ತಿಂಡಿಯನ್ನು ತಿಂದ ಕವರ್‌ಗಳನ್ನು ನೆಲದ ಮೇಲೆ ಎಸೆದು ಹೋಗುತ್ತಿದ್ದೇವೆ. ನಾವು ಉಣ್ಣುವ ಪದಾರ್ಥಗಳೆಲ್ಲ ನಮಗೆ ವಿಷವನ್ನು ಉಂಟು ಮಾಡುತ್ತದೆ ಎನ್ನುವ ಅರಿಯುವು ಇದ್ದರೂ ರಾಸಾಯನಿಕ ಗೊಬ್ಬರಗಳನ್ನು ಹಾಕಿದ್ದೇವೆ. ನಗರದಲ್ಲಿ–ಹಳ್ಳಿಯಲ್ಲಿ ಮನೆ, ಮಾಲು ಇತ್ಯಾದಿಗಳನ್ನು ಕಟ್ಟುವುದಕ್ಕೆ ಸರ್ಕಾರಿ ವ್ಯವಸ್ಥೆಗೆ ಹಣ ನೀಡಿ ಪರವಾನಗಿಯನ್ನು ಪಡೆದು ಅವ್ಯವಸ್ಥಿತವಾದ ಪರಿಸವನ್ನು ಹುಟ್ಟು ಹಾಕಿಕೊಂಡು ಈಗ ನೆಪಕ್ಕೆ ಸಮಾಜ ಸರಿಯಿಲ್ಲ ಭ್ರಷ್ಟಚಾರ ತುಂಬಿದೆ ಎಂದು ಬೊಬ್ಬೆ ಹೊಡೆಯುತ್ತಿರುವುದು ನಮ್ಮ ಸಾಮಾನ್ಯ ಸ್ಥಿತಿಯಾಗಿದೆ. ತೋಡು, ಬಾವಿ, ನೀರಿನ ಹರಿವುಗಳನೆಲ್ಲ ಆಸೆಯಿಂದ ಮಣ್ಣು ತುಂಬಿ ಮಟ್ಟಾಸು ಮಾಡಿ ಮನೆ ಕಟ್ಟಿದ್ದೇವೆ, ರಸ್ತೆ ಮಾಡಿದ್ದೇವೆ ಅಷ್ಟೇ ಅಲ್ಲದೆ ಗುಡ್ಡವನ್ನು, ಕಣಿವೆಯನ್ನು ಅಗೆದು ಬಗೆದು ಬಾಡಿಗೆಗೆ–ವಾಸಕ್ಕೆ ಎಂದೆಲ್ಲ ಕಟ್ಟಡಗಳನ್ನು ಕಟ್ಟಿದ್ದೇವೆ ಇಲ್ಲಿ ಬಹುತೇಕ ಯಾವುದೇ ವ್ಯವಸ್ಥಿತವಾದ ಯೋಜನಾ ಬದ್ಧವಾದ ನಿರ್ಮಾಣಗಳೇ ಇಲ್ಲ ಹೀಗೆ ಏಕೆ? ಎನ್ನುವ ಕಡೆಗೆ ನಾವು ಗಮನ ಹರಿಸಬೇಕಾದ ಅಗತ್ಯತೆ ಇದೆ.

ನಗರ ಮತ್ತು ಹಳ್ಳಿಗಳಲ್ಲಿ ಕೂಡು ಕುಟುಂಬಗಳು ಇಂದು ಅಸ್ಥಿತ್ವವನ್ನು ಕಳೆದುಕೊಂಡು ಅಣು ಕುಟುಂಬವಾಗಿ ರೂಪ ಪಡೆದು ಹೆಚ್ಚಿನ ಮನೆಗಳು ಹುಟ್ಟಿಕೊಳ್ಳುತ್ತಿವೆ ಮತ್ತು ಉದ್ಯೋಗದ ನೆಲೆಯಿಂದ ಜನರ ಪ್ರಮಾಣ ಕಡಿಮೆ ಪ್ರದೇಶದಲ್ಲಿ ಅಧಿಕವಾಗಿದ್ದ ಕಾರಣ ಎಲ್ಲರಿಗೂ ಸೂರು ಬೇಕು, ವಾಹನಗಳು ನಡೆಯಲು ರಸ್ತೆಗಳು ಬೇಕು ಎನ್ನುವ ಹಂಬಲಗಳು ವ್ಯವಸ್ಥೆಯನ್ನು ಮೀರಿ ಕಟ್ಟಡಗಳು ಬೆಳೆದಿವೆ. ಇದಕ್ಕೆ ಬೆಂಬಲವೆಂಬಂತೆ ಓಟು ಬ್ಯಾಂಕಿನ ರಾಜಕೀಯವು ಅಧಿಕಾರದ ನೆಲೆಯಿಂದ ಯೋಜನೆಯನ್ನು ಮೀರಿ ಮನೆ, ಮಾಲು, ಬೀದಿ ಬದಿಯ ಅಂಗಡಿ ಇತ್ಯಾದಿ ಬೆಳವಣಿಗೆ ಸಹಕಾರ ನೀಡಿದೆ ಈ ಕಾರಣದಿಂದ ಜನ ಮತ್ತು ವ್ಯವಸ್ಥೆ ಭ್ರಷ್ಟವಾಗಿ ಸರಿಪಡಿಸಲಾಗದ ಸ್ಥಿತಿಯನ್ನು ತಲುಪಿದ್ದು ನಮ್ಮ ಅರಿವಿಗೆ ದಕ್ಕದಿರುವುದು ಸಹ ಮೂರ್ಖತನವಾಗಿದೆ. ಭೂಮಿಗೆ ಹೆಚ್ಚಿನ ಬೆಲೆ ನಿಗದಿಯಾಗಿರುವುದು, ಪರಿಸರ ನಿರ್ವಹಣೆಯ ಬಗ್ಗೆ ಸೂಕ್ತ ತಿಳುವಳಿಯು ಸರ್ವರಿಗೂ ದಕ್ಕದೆ ಇರುವುದು ಸಾಮಾಜಿಕ ಬದ್ಧತೆಯನ್ನು ಕಳೆಯುವಂತೆ ಮಾಡಿದೆ ಎನ್ನುವುದು ಸತ್ಯ.

ನಾವು ಕಟ್ಟಿಕೊಂಡಿರುವ ಆಧುನಿಕತೆಯ ನಾಗರೀಕತೆ ಭೌತ ಸಂಸ್ಕೃತಿಯು ಉಳಿಯಬೇಕಾದರೆ ಯೋಜನೆ ಬದ್ಧವಾದ ಜೀವನ ವಿಧಾನವನ್ನು ಅಳವಡಿಸಿಕೊಳ್ಳಬೇಕು. ಮನುಷ್ಯರಾದ ನಾವು ಮಾತ್ರ ಬದುಕುವ ದಾರಿಯನ್ನು ಯೋಚಿಸುವ ಬದಲು ಪ್ರಕೃತಿಯೊಂದಿಗೆ ಜೀವನ ನಡೆಸುವ ಯೋಚನೆಯನ್ನು ಮಾಡಿದರೆ ಆರೋಗ್ಯಪೂರ್ಣ ಸಮಾಜ ರೂಪಿಸುವುದಕ್ಕೆ ಸಾಧ್ಯ.

# ಸುತ್ತಲೂ ಹಸಿರು : ನಮ್ಮೆಲ್ಲರ ಉಸಿರು

ಪ್ರಕೃತಿಯು ಮಾನವನ ಅಗತ್ಯತೆಗಳನ್ನು ಪೂರೈಸುತ್ತದೆ. ಆದರೆ ಮಾನವನ ಅನಿಯಮಿತ ಬಯಕೆಗಳನ್ನಲ್ಲ." ಎಂದು ನಮ್ಮ ಭಾರತದ ಪಿತಾಮಹ ಮಹಾತ್ಮ ಗಾಂಧೀಜಿ ಅವರು ಹೇಳಿದಂತೆ , ಜೀವಸಂಕುಲದ ಏಳಿಗೆಗೆ ಪರಿಸರವು ಮಹತ್ತರ ಪಾತ್ರವನ್ನು ವಹಿಸುತ್ತದೆ." ಧರ್ಮೋ ರಕ್ಷತಿ, ರಕ್ಷಿತ: ಎಂಬಂತೆ ಪರಿಸರವನ್ನು ನಾವು ರಕ್ಷಿಸಿದರೆ ಪರಿಸರವು ನಮ್ಮನ್ನು ರಕ್ಷಿಸುವುದು. ಮುಂದಿನ ಪೀಳಿಗೆಗೆ ಉಳಿಸಿಕೊಡುವುದು ನಮ್ಮೆಲ್ಲರ ಹೊಣೆಗಾರಿಕೆ ಮತ್ತು ಆದ್ಯ ಕರ್ತವ್ಯವಾಗಿದೆ.

ಪರಿಸರವು ನಮಗೆ ಗಾಳಿ ,ನೀರು, ಬೆಳಕು,ಮತ್ತು ಆಹಾರ ಜೀವನಕ್ಕೆ ಅತ್ಯವಶ್ಯಕವಾದಂತಹ ಅಂಶಗಳನ್ನು ಯಾವುದೇ ಪ್ರಕೃತಿ ಭೇದವಿಲ್ಲದೆ ಒದಕಿಸುತ್ತಿದೆ. ಒಂದು ವೇಳೆ ಭೂಮಿಯ ಮೇಲೆ ಇಂತಹ ಅನುಕೂಲಕರ ಪರಿಸರದ ಅಸ್ತಿತ್ವ ಇರದೇ ಇದ್ದರೆ ಬಹುಶಃ ಮಾನವ ಸಂಕುಲ ಇಷ್ಟೊಂದು ಸಾಧನೆಗಳನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಸಾವಿರಾರು ವರುಷಗಳ ಕಾರ್ಯಾಚರಣೆಯ ನಿಮಿತ್ತ ಪ್ರಕೃತಿಯು ನಮಗೆ ಉತ್ತಮವಾದ ವಾತಾವರಣವನ್ನು ಸೃಷ್ಟಿಸಿ ಕೊಟ್ಟಿದೆ . ಇಂತಹ ಪರಿಸರವನ್ನು ನಾವು ಉಳಿಸಿಕೊಳ್ಳುವಲ್ಲಿ ಅನುಸರಿಸಬೇಕಾದ ಕ್ರಮಗಳೆಂದರೆ, ಕಾಡುಗಳನ್ನು ಉಳಿಸುವುದು ಮತ್ತು ಬೆಳೆಸುವುದು. ಪರಿಸರ ಸ್ನೇಹಿಕಾರ್ಯಗಳನ್ನು ಕೈಗೊಳ್ಳುವುದು. ಶುದ್ಧ ಗಾಳಿ ನಮ್ಮೆಲ್ಲರ ಉಸಿರು ಇದನ್ನು ಶುದ್ಧ ವಿರಿಸಿಕೊಳ್ಳಲು ವಾಹನಗಳ ಬಳಕೆಗಳನ್ನು ಅಗತ್ಯವಿದ್ದಾಗ ಮಾತ್ರ ಬಳಸುವುದು. ಜೀವ ಜಲವೆಂದೇ ಪರಿಗಣಿಸುವ ಕುಡಿಯುವ ಸಿಹಿ ನೀರನ್ನು ಮಿತವಾಗಿ ಬಳಸುವುದು. ಆಧುನಿಕತೆಯ ಭರದಲ್ಲಿ ಪರಿಸರವನ್ನು ಕಡೆಗಾಣಿಸದೆ ಗ್ರೀನ್ ಸಿಟಿ ಪರಿಕಲ್ಪನೆಯನ್ನು ಜಾರಿಗೊಳಿಸುವುದು. ಮತ್ತು ರಸಗೊಬ್ಬರಗಳ ಬಳಕೆಯನ್ನು ಮಿತಗೊಳಿಸಿ ಸಾವಯವ ಕೃಷಿಗೆ ಮನ್ನಣೆ ನೀಡುವುದು. ಹಾಗೂ ಕಾರ್ಖಾನೆಗಳ ಸ್ಥಾಪನೆಯನ್ನು ಎಷ್ಟು ಸಾಧ್ಯವೊ ಅಷ್ಟು ತಡೆಗಟ್ಟುವುದು.

ಮಾನವ ಸಂಕುಲವು ಒಂದು ವಿಷಯವನ್ನು ನೆನಪಿಟ್ಟುಕೊಳ್ಳಬೇಕು. ನಾವು ಭೂಮಿಗೆ ಅತಿಥಿಗಳು ಮಾತ್ರ ಒಂದೊಮ್ಮೆ ಭಗವಂತ ಕೂಗಿದರೆ ನಮ್ಮ ಕ್ರಮ ಸಂಖ್ಯೆಯ ನಾವು ಇರುವುದೆಲ್ಲವನ್ನು ಬಿಟ್ಟು ಹೊರಡಬೇಕು ಮಧ್ಯದಲ್ಲಿ ನಮಗೆ ಜೀವ ಮತ್ತು ಜೀವನವನ್ನು ನೀಡಿದ ಪ್ರಕೃತಿ ಮಾತೆಯ ಒಡಲನ್ನು ಬರೆದು ಮಾಡದೆ ನಮ್ಮದೇ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡುವುದು ನಮ್ಮ ನಿಮ್ಮ ಜವಾಬ್ದಾರಿಯದ ಹೊಣೆಗಾರಿಕೆಯಾಗಿದೆ.

ನಮ್ಮೆಲ್ಲರ ಉಸಿರು ನಮ್ಮ ಪ್ರಕೃತಿ ಉಳಿಸಿಕೊಳ್ಳುವುದು ನಮ್ಮೆಲ್ಲರ ಸಂಸ್ಕೃತಿ.

■ ಪದ್ಮಜ ನಾಗಲಾಪುರ ಮಠ.
ಅರ್ಥಶಾಸ್ತ್ರ ವಿಭಾಗ.
ಕೊಪ್ಪಳ ವಿಶ್ವವಿದ್ಯಾಲಯ.



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಶಾಂತ–ಪ್ರಶಾಂತ

ಹುಡುಕಲು ಹೊರಟರೆ ಸಿಗುವುದಿಲ್ಲ ಶಾಂತಿ
ನಮ್ಮೊಳಗೆ ಇರುವುದು ನೆಮ್ಮದಿಯ ಕಾಂತಿ
ಶುರುವಾಗಿದೆ ಮನಸ್ಸಿಗೂ ಬುದ್ದಿಗೂ
ನಡುವೆ ಯುದ್ಧ
ನಾನಡೆವೆ ಹೃದಯದ ಮಾತಿಗೆ ಬದ್ಧ

ಮನದಲ್ಲಿ ಮೂಡಿದೆ ಆಸೆಗಳ ಸಾಗರ
ಕಾಣುತಿದೆ ಕನಸಿನ ಆಗರ
ಸಾಕೆನಿಸುತಿದೆ ಭಾವನೆಗಳ ಅಬ್ಬರ
ನಿಯಂತ್ರಿಸಲಾಗದು ಮನಸ್ಸಿನ ಭಾರ

ಸ್ಮರಿಸೋಣ ಭಗವಂತನ ನಾಮ
ಕಷ್ಟ ಕಾರ್ಪಣ್ಯಗಳ ಪರಿಹರಿಸುವನು ರಾಮ
ಬದುಕಾಗುವುದು ಸುಂದರ ಧಾಮ

ಮನಸ್ಸಿನ ಚಂಚಲತೆ ಆದರೆ ಶಾಂತ
ಕಾಣುವುದು ಜಗತ್ತೇ ಪ್ರಶಾಂತ

**–ಚೇತನ ಭಾರ್ಗವ, ಬೆಂಗಳೂರು**

### ಹಸಿರು

ಹಸಿರುಸಿರು ಈ ಭೂಮಿಯ ಪ್ರಾಣ,
ಕಾಡು, ಮೇಡು, ಗಿಡಮರಗಳೇ ಸಿರಿಧಾಮ.
ಶುದ್ಧ ಗಾಳಿ, ತಂಪಾದ ನೀರು,
ಇದೇ ನಮ್ಮೆಲ್ಲರ ಜೀವನಾಧಾರ.

ಸಾಗರಗಳ ಅಲೆಗಳ ನರ್ತನ,
ಪರ್ವತಗಳ ಭವ್ಯ ದರ್ಶನ.
ಪ್ರಕೃತಿಯ ಈ ಅದ್ಭುತ ಸೃಷ್ಟಿ,
ನಮ್ಮ ಜೀವನಕ್ಕೆ ಇದುವೇ ಸ್ಫೂರ್ತಿ.

ಕಲರವ ಮಾಡುವ ಹಕ್ಕಿಗಳು,
ಓಡಾಡುವ ನವಿಲುಗಳು.
ಪ್ರತಿಯೊಂದು ಜೀವಿಯಲ್ಲೂ ಸೌಂದರ್ಯ,
ಅದುವೇ ಪ್ರಕೃತಿಯ ಅಪ್ಪಟ ಸೌಂದರ್ಯ.
ಇದನ್ನು ನಾವು ರಕ್ಷಿಸಬೇಕು,
ನಮ್ಮ ಭವಿಷ್ಯಕ್ಕೆ ಉಳಿಸಬೇಕು.
ಮಾಲಿನ್ಯವ ದೂರ ಮಾಡಬೇಕು,
ಹಸಿರು ಭೂಮಿಯನ್ನಾಗಿ ಕಾಪಾಡಬೇಕು.

**– ವೆಂಕಟೇಶ್ ಡಿ., ಹೊಸಪೇಟೆ**

## ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ : ಆರೋಪಿಗೆ ಶಿಕ್ಷೆ

**ಹಂಪಿ ಟೈಮ್ಸ್ ಕೊಪ್ಪಳ**

ಅಪ್ರಾಪ್ತ ವಯಸ್ಸಿನ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಹಿನ್ನೆಲೆಯಲ್ಲಿ ಆರೋಪ ಸಾಭಿತಾಗಿ ಎಂದು ಗಂಗಾವತಿ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಆರೋಪಿಗೆ ಶಿಕ್ಷೆ ವಿಧಿಸಿದ್ದಾರೆ.

ಗಂಗಾವತಿ ಗ್ರಾಮೀಣ ಪೋಲಿಸ್ ಠಾಣೆ ವ್ಯಾಪ್ತಿಯ ಪಿರ್ಯಾಧಿದಾರರ ಮಗಳು 3ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, 2022ರ ಸೆಪ್ಟೆಂಬರ್ 8ರಂದು ಸಂಜೆ 4.30 ಗಂಟೆಗೆ ಮಗಳು ಮನೆಗೆ ಬಂದಾಗ ಹಾಲಿನ ಕೇಂದ್ರದಲ್ಲಿ ಹಾಲು ತರಲು ಕಳುಹಿಸಿದ್ದು, ಮಲ್ಲಾಪುರ ಗ್ರಾಮದ ಆಂಜಿನಪ್ಪ ಬಂಡಿ ಇತನ ಮನೆಯ ಮುಂದೆ ಬಾಧಿತ ಮಗು ಹೋಗುತ್ತಿದ್ದಾಗ ಆಂಜಿನಪ್ಪನು ಬಾಧಿತ ಮಗುವಿಗೆ ನಮಗೂ ಹಾಲು ತರುವಂತೆ ನೆಪ ಹೇಳಿ ತನ್ನ ಮನೆಯ ಒಳಗೆ ಕರೆದುಕೊಂಡು ಹೋಗಿ ಮಂಚದ ಮೇಲೆ ಮಲಗಿಸಿ ಮೈ ಮೇಲೆ ಬಿದ್ದಾಗ ಬಾಧಿತ ಮಗು ಚೀರಾಡಿದ ಶಬ್ದ ಕೇಳಿ ಓಣಿಯ ಜನರು ಬಂದು ಬುದ್ದಿವಾದ ಹೇಳಿ ಛೀಮಾರಿ ಹಾಕಿದ್ದಾರೆ. ಈ ಹಿನ್ನೆಲೆಯಲ್ಲಿ ಗಂಗಾವತಿ ಗ್ರಾಮೀಣ ಪೋಲಿಸ್ ಠಾಣೆಯ ಪಿ.ಐ ಮಂಜುನಾಥ ಎಸ್. ಅವರು ದೂರು ಸ್ವೀಕರಿಸಿ ಪ್ರಕರಣದ ತನಿಖೆ ನಿರ್ವಹಿಸಿ ಆರೋಪಿತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣವು ಸ್ಪೇ.ಎಸ್‌ಸಿ(ಪೋಕ್ಸೊ) ಸಂ: 12/2024ರಲ್ಲಿ ದಾಖಲಾಗಿದ್ದು, ವಿಚಾರಣೆಯನ್ನು ನಡೆಸಿದ ನ್ಯಾಯಾಲಯವು ಆರೋಪಿ ಮಲ್ಲಾಪುರದ ಆಂಜಿನಪ್ಪ ಬಂಡಿ ಇತನ ಮೇಲಿನ ಆರೋಪಣೆಗಳು ಸಾಭೀತಾಗಿದೆ ಎಂದು 4 ವರ್ಷಗಳ ಜೈಲು ಶಿಕ್ಷೆ ಹಾಗೂ ರೂ. 60,000 ಗಳ ದಂಡವನ್ನು ಭರಿಸುವಂತೆ ಆದೇಶಿಸಿ ಗಂಗಾವತಿ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರಾದ ಸದಾನಂದ ನಾಗಪ್ಪ ನಾಯಕ ಅವರು 2025ರ ಮೇ 30ರಂದು ತೀರ್ಪು ಹೊರಡಿಸಿರುತ್ತಾರೆ.

ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಗೌರಮ್ಮ ದೇಸಾಯಿ ಅವರು ಪ್ರಕರಣ ನಡೆಸಿ ವಾದ ಮಂಡಿಸಿದ್ದರು. ಗಂಗಾವತಿ ಗ್ರಾಮೀಣ ಪೋಲಿಸ್ ಠಾಣೆಯ ಪೋಲಿಸ್ ಸಿಬ್ಬಂದಿ ವಿಶ್ವನಾಥ ಅವರು ನ್ಯಾಯಾಲಯದಲ್ಲಿ ಸಾಕ್ಷಿದಾರರನ್ನು ಸಕಾಲಕ್ಕೆ ಹಾಜರಪಡಿಸಿ ಆರೋಪ ಸಾಭೀತುಪಡಿಸಲು ಸಹಕರಿಸಿರುತ್ತಾರೆ ಎಂದು ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಶ್ರೀನಿವಾಸ ಕಲ್ಯಾಣ... ಭಗವಂತನಿಗೇ ಮದುವೆ



ನಮ್ಮ ಭಾರತೀಯ ಸಂಪ್ರದಾಯದಲ್ಲಿ ಮಾತ್ರವಲ್ಲ ಇಡೀ ಜಗತ್ತಿನ ಎಲ್ಲ ಸಂಪ್ರದಾಯಗಳಲ್ಲಿಯೂ ವಿವಾಹದ ಬಂಧನಕ್ಕೆ ಪರಮ ಪವಿತ್ರ ಸ್ಥಾನವಿದೆ. ನಾವು ಭಾರತೀಯರು ಸಪ್ತಪದಿಯ ಏಳೇಳು ಜನ್ಮದ ಬಂಧನದಲ್ಲಿ ನಂಬಿಕೆ ಇಟ್ಟಿದ್ದೇವೆ. 'ವಿವಾಹಗಳು ಸ್ವರ್ಗದಲ್ಲಿ ನಿಶ್ಚಯಿಸಲ್ಪಟ್ಟಿರುತ್ತವೆ' ಎಂಬ ಮಾತನ್ನು ನಂಬುವ ನಮ್ಮ ಸಂಪ್ರದಾಯದಲ್ಲಿ "ಋಣಾನುಬಂಧ ರೂಪೇಣ ಪಶು ಪತ್ನಿ ಸುತಾಲಯ" ಎಂಬ ಮಾತಿದೆ.

ಇಂತಹ ಭಾರತೀಯ ಸಂಪ್ರದಾಯದಲ್ಲಿ ವಯಸ್ಸಿಗೆ ಬಂದ ಯುವಕ ಯುವತಿಯರಿಗೆ ತಮ್ಮ ತಮ್ಮ ಧರ್ಮದ, ಜಾತಿಯ, ಅಂತಸ್ತಿಗೆ ತಕ್ಕನಾದ, ಸಮಾನ ಮನಸ್ಥಿತಿಯುಳ್ಳ, ಸರೀಕ ಪರಿಸ್ಥಿತಿಗಳುಳ್ಳ ವಧು–ವರರ ಕುಟುಂಬದವರು ಪರಸ್ಪರ ಒಪ್ಪಿಗೆಯ ಮೇರೆಗೆ ವಿವಾಹವನ್ನು ಏರ್ಪಡಿಸುತ್ತಾರೆ. ಸರ್ವಾಲಂಕೃತನಾದ ವರ ವಿವಾಹ ನಿಶ್ಚಿತಾರ್ಥದ ನಂತರ ಹತ್ತು ಹಲವು ಪೂಜಾ ವಿಧಿಗಳ ನಂತರ ಈ ಮೊದಲೇ ನಿಗದಿಪಡಿಸಿದ ಲಗ್ನದ ಮುಹೂರ್ತದಲ್ಲಿ ಗುರು ಹಿರಿಯರು ಬಂಧು ಬಾಂಧವರ ಸಮ್ಮುಖದಲ್ಲಿ ತಾಳಿಯ ಮೂರು ಗಂಟನ್ನು

ಸರ್ವಾಲಂಕೃತವಾಗಿ ತಾಯಿ ಗೌರಿಯ ಪೂಜೆ ಮಾಡಿ ಆಶೀರ್ವಾದ ಪಡೆದು ಹಸೆಮಣೆಯನ್ನೇರಿದ ತನ್ನ ನಿಶ್ಚಿತ ವಧುವಿನ ಕೊರಳಿಗೆ ತಾಳಿಯನ್ನು ಕಟ್ಟುವ ಮೂಲಕ ಪಾಣಿಗ್ರಹಣ ಮಾಡುತ್ತಾನೆ." ಧರ್ಮೇಚ, ಅರ್ಥೇಚ, ಕಾಮೇಚ ನಾತಿಚರಾಮಿ" ಎಂದು ಕುಲ ದೇವರು ಮತ್ತು ನೆರೆದಿರುವ ದೈವದ ಮುಂದೆ ಅಗ್ನಿಸಾಕ್ಷಿಯಾಗಿ ತಾಳಿ ಕಟ್ಟುವ ಮೂಲಕ ಆಕೆಯನ್ನು ತನ್ನವಳಾಗಿಸಿಕೊಳ್ಳುತ್ತಾನೆ. ವಧುವಿನ ತಂದೆ ತಾಯಿಯರಿಂದ ಕನ್ಯಾ ಆದಾನವನ್ನು ಪಡೆದುಕೊಂಡು ಚತುರ್ಭುಜನಾಗುತ್ತಾನೆ. ದೈವದ ಪೂಜೆ, ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಸಪತ್ನೀಕನಾಗಿ ಪೂಜೆ ಪುನಸ್ಕಾರಗಳನ್ನು ಸಲ್ಲಿಸಲು ಅರ್ಹತೆಯನ್ನು ಗಳಿಸಿಕೊಳ್ಳುತ್ತಾನೆ. ಇದು ಮನುಷ್ಯನು ತನ್ನ ಬದುಕಿನಲ್ಲಿ ಸಂಗಜೀವನವನ್ನು ನಡೆಸಲು ಇರುವ ಸಾಮುದಾಯಿಕ ಒಪ್ಪಿಗೆಯ ಅತ್ಯಂತ ಪವಿತ್ರವಾದ ಕಲ್ಯಾಣ ಕಾರ್ಯಕ್ರಮ. ಕಲ್ಯಾಣ ಎಂದರೇನೆ ಒಳ್ಳೆಯದಾಗುವುದು ಎಂದು ಅರ್ಥ ಅಲ್ಲವೇ?

ಆದರೆ ನಮ್ಮ ಭಾರತೀಯ ಸಂಪ್ರದಾಯದಲ್ಲಿ ಜನರು ಕೇವಲ ತಾವು ಮಾತ್ರ ವಿವಾಹವಾಗುವುದಿಲ್ಲ, ತಾವು ಆರಾಧಿಸುವ ಪೂಜಿಸುವ ದೇವರ ವಿವಾಹವನ್ನು ಮಾಡಿ ಸಂತಸ ಪಡುತ್ತಾರೆ. ನಮ್ಮ ಶರಣ ಸಂಪ್ರದಾಯದಲ್ಲಿ ಶ್ರಾವಣ ಮಾಸ ಮತ್ತು ದಸರೆಯ ಸಮಯದಲ್ಲಿ ವಿವಿಧ ಪುರಾಣಗಳನ್ನು ಹೇಳುವ ಸಮಯದಲ್ಲಿ ಕನ್ಯೆ ನೋಡುವ ಪರಸ್ಪರ ವಧು ವರರ ಒಪ್ಪಿಗೆಯನ್ನು ಕೇಳುವ ಗುರು ಹಿರಿಯರ ಸಮ್ಮುಖದಲ್ಲಿ ವಿವಾಹ ಕಾರ್ಯವನ್ನು ಕೈಗೊಳ್ಳುವ ದೇವರ ಅಥವಾ ಶರಣ ಸ್ತ್ರೀಯ ಸೀಮಂತ ಕಾರ್ಯವನ್ನು ಮಾಡಿ ಮಗು ಜನಿಸುವ, ತೊಟ್ಟಿಲು ಶಾಸ್ತ್ರ ಮಾಡಿ ನಾಮಕರಣ ಮಾಡುವ ಮಗುವಿನ ಬೆಳವಣಿಗೆಯ ಹತ್ತು ಹಲವು ಕಾರ್ಯಕ್ರಮಗಳನ್ನು ನೆರವೇರಿಸಿ ಇರುವ ಜನರಲ್ಲಿಯೇ ಕೆಲವರು ವರನ ಮನೆಯವರಾಗಿಯೂ ಮತ್ತೆ ಕೆಲವರು ವಧುವಿನ ಮನೆಯವರಾಗಿಯೂ ಕಾರ್ಯಗಳನ್ನು ನಿರ್ವಹಿಸುತ್ತಾ ಅವರ ಮದುವೆಯ, ವಧುವಿಗೆ ನೀಡುವ ಬಯಕೆಯ ಬುತ್ತಿಯ, ಸೀಮಂತ ಕಾರಣದ ನಾಮಕರಣದ ಕಾರಣಗಳನ್ನು ಪುರಾಣ ಪ್ರವಚನದ ಜೊತೆ ಜೊತೆಗೆ ಹೂಡಿ ಹತ್ತು ಹಲವು ಅಡುಗೆಗಳನ್ನು ತಯಾರಿಸಿ ದೇವರಿಗೆ ನೈವೇದ್ಯವನ್ನು ಮಾಡಿ, ನಂತರ ಆ ಪ್ರಸಾದವನ್ನು ದಾಸೋಹ ರೂಪದಲ್ಲಿ ಜನರಿಗೆ ಉಣ ಬಡಿಸುತ್ತಾರೆ.

ಕೆಲವರಿಗೆ ಇದು ಅತಿರೇಕ ಎನ್ನಿಸಬಹುದು ಮೂಢ ತನವೆಂದು ಕರೆಯಬಹುದು ದೇವರ ವಿವಾಹವೇ!? ಎಂದು ಅಲ್ಲಗಳೆಯಬಹುದು..... ಆದರೆ ತಮ್ಮ ಮನಸ್ಸಿನ ಆಸೆಗಳನ್ನು, ಸಂಕಲ್ಪಗಳನ್ನು ಈಡೇರಿಸಿದ ದೇವರಿಗೆ ಕಾಣಿಕೆಯಾಗಿ ಈ ರೀತಿಯ ಸಂಕಲ್ಪ ಸೇವೆಗಳನ್ನು ಮಾಡುವ ಹಕ್ಕು ಮತ್ತು ಶ್ರದ್ಧೆ ನಮ್ಮ ಭಕ್ತರಲ್ಲಿ ಇದ್ದೇ ಇದೆ. ಬಹುಶಹ ದೇವರ ಹೆಸರಿನಲ್ಲಿ ಉಟ್ಟು ತೊಟ್ಟು ಸಡಗರ ಸಂಭ್ರಮದಿಂದ ನಕ್ಕು ನಲಿಯಲು, ಊಟ ಮಾಡಲು ಇಂತಹ ಕಾರ್ಯಕ್ರಮಗಳು ನಮ್ಮ ದೈನಂದಿನ ಜೀವನದ ಏಕತಾನತೆಯ ಜಡತೆಯನ್ನು ದೂರಕ್ಕೆ ಅಟ್ಟಲು ಬೇಕೇ ಬೇಕು. ಅದರಲ್ಲೂ ನಾವು ಭೂಲೋಕದ ಜನ ನಮ್ಮ ಮನೆಮಗಳು ಪಾರ್ವತಿ ದೇವಿಯನ್ನು ಕೈಲಾಸ ವಾಸಿ ಶಿವನಿಗೆ ಮದುವೆ ಮಾಡಿಕೊಟ್ಟು ಮುಕ್ಕಣ್ಣನನ್ನು ನಮ್ಮ ಅಳಿಯನನ್ನಾಗಿ ಮಾಡಿಕೊಂಡವರು. ಅವರಿಬ್ಬರ ಮಗ ಗಣೇಶ ಸುಬ್ರಹ್ಮಣ್ಯರನ್ನು ಮನೆ ಮಕ್ಕಳಾಗಿ ಪ್ರೀತಿಸಿದವರಲ್ಲವೇ! ಭಕ್ತಿಯ ಪ್ರೀತಿಯಲ್ಲಿ ಕೆಲ ಆಚರಣೆಗಳು ನಮ್ಮನ್ನು ಚೇತೋಹಾರಿಯನ್ನಾಗಿಸುತ್ತವೆ. ಇಂತಹ ಒಂದು ಕಾರ್ಯಕ್ರಮ ಇತ್ತೀಚೆಗೆ ನಾನು ನೋಡಿದ ಶ್ರೀನಿವಾಸ ಕಲ್ಯಾಣ.

ಕಲಿಯುಗದ ದೇವರು, ಸಪ್ತಗಿರಿವಾಸ, ತಿರುಪತಿ ತಿರುಮಲ ವಾಸ, ಗೋವಿಂದ, ಶ್ರೀನಿವಾಸ, ವೆಂಕಟಗಿರಿ ನಾಥ, ವೆಂಕಟೇಶ, ಬಾಲಾಜಿ ಎಂದು ಹತ್ತು ಹಲವು ನಾಮಗಳಿಂದ ಕರೆಸಿಕೊಳ್ಳುವ ವೆಂಕಟೇಶ್ವರ ಮದುವೆಯಾದ ಕಥೆ ನಮಗೆಲ್ಲ ಗೊತ್ತೇ ಇದೆ. ಅತ್ಯಂತ ಸುಂದರನಾದ ಆದರೆ ಅಷ್ಟೇ ಕಡು ಬಡವನಾದ ಶ್ರೀನಿವಾಸನ ಕಲ್ಯಾಣಕ್ಕೆ ಶಿವನ ಆದಿಯಾಗಿ ಎಲ್ಲರೂ ತಮ್ಮ ತಮ್ಮ ಕೈಲಾದಷ್ಟು ಸಹಾಯ ಮಾಡಿದ್ದರು ಕುಬೇರನಂತೂ ತನ್ನ ಸಂಪತ್ತನ್ನು ಆತನ ವಿವಾಹ ಮಹೋತ್ಸವಕ್ಕೆ ನೀಡಿದನು ಎಂದೆಲ್ಲಾ ನಾವು ಓದಿದ್ದೇವೆ, ಕೇಳಿದ್ದೇವೆ ಅಲ್ಲವೇ?

ಇತ್ತೀಚೆಗೆ ಕುಟುಂಬ ಸ್ನೇಹಿತರ ಮನೆಯಲ್ಲಿ ನಾನು ನೋಡಿದ 'ಶ್ರೀನಿವಾಸ ಕಲ್ಯಾಣ' ಕಾರ್ಯಕ್ರಮದಲ್ಲಿ ಮೊದಲು ಮಲಗಿದ ಶ್ರೀನಿವಾಸ ದೇವರಿಗೆ "ಕೌಸಲ್ಯ ಸುಪ್ರಜ ರಾಮ ಪೂರ್ವ ಸಂಧ್ಯಾ ಪ್ರವರ್ಧತೆ" ಎಂದು ಸುಪ್ರಭಾತ ಹೇಳುವ ಮೂಲಕ ಸೇವೆಯನ್ನು ಸಲ್ಲಿಸಿ ಅಡ್ಡಲಾಗಿ ಮಲಗಿಸಿದ್ದ ವೆಂಕಟೇಶ್ವರ, ಶ್ರೀದೇವಿ ಮತ್ತು ಭೂದೇವಿಯರ ಮೂರ್ತಿಗಳನ್ನು ಎಬ್ಬಿಸಿ ನಿಲ್ಲಿಸಿದರು. ನಂತರ ಹಲವಾರು ( 27 ನಕ್ಷತ್ರಗಳನ್ನು ಹೆಸರಿಸಿ) ಬಿಂದಿಗೆಗಳಲ್ಲಿ ತಂದ ನೀರಿಗೆ ಗಂಗೆಯನ್ನು ಆಹ್ವಾನಿಸಿ ಪೂಜೆ ಮಾಡಿ ಮಾಡಿ ಕಳಶ ಪೂಜನ ವಿಧಿಯನ್ನು ಪೂರೈಸಿದರು. ಹಾಲು ಮೊಸರು ತುಪ್ಪ ಕಲ್ಲು ಸಕ್ಕರೆ ಮತ್ತು ಜೇನುತುಪ್ಪದಿಂದ ತಯಾರಿಸಿದ ಪಂಚಾಮೃತವನ್ನು ಮೊದಲು ಹಾಕಿ, ನಂತರ ಅರಿಶಿಣ ಮತ್ತು ಶ್ರೀಗಂಧವನ್ನು ಲೇಪಿಸಿ ಮೂರೂ ವಿಗ್ರಹಗಳಿಗೆ ಮಂಗಳ ಸ್ನಾನವನ್ನು ಮಾಡಿಸಿದರು. ಹೀಗೆ ಮಂಗಳ ಸ್ನಾನ ಮಾಡಿಸಿದ ನೀರನ್ನು ಪ್ರತ್ಯೇಕವಾಗಿ ಒಂದು ದೊಡ್ಡ ಬಕೇಟಿನಲ್ಲಿ ಸಂಗ್ರಹಿಸಿ ಪೂಜೆಗೆ ಸಂಕಲ್ಪ ಮಾಡಿ ಕುಳಿತುಕೊಳ್ಳುವ ದಂಪತಿಗಳನ್ನು ಕೂರಿಸಿ ಅವರಿಗೆ ಅರಿಶಿಣ ಹಚ್ಚಿ ಬಕೇಟಿನಲ್ಲಿ ಸಂಗ್ರಹಿಸಿದ ನೀರನ್ನು ಜರಡಿಯ ಮೂಲಕ ಅವರ ತಲೆಯ ಮೇಲಿನಿಂದ ಸುರಿದು ಅವರಿಗೂ ಕೂಡ ಮಂಗಳ ಸ್ನಾನವನ್ನು ಮಾಡಿಸಿ ಅಲ್ಲಿಯೇ ಅವರಿಗೆ ಅರಿಶಿಣ ಕುಂಕುಮ ನೀಡಿ ಬೇರೆ ಬಟ್ಟೆ ಧರಿಸಲು ಕಳುಹಿಸಿದರು.



**ವೀಣಾ ಹೇಮಂತಗೌಡ ಪಾಟೀಲ್**
**ಲೇಖಕರು, ಮುಂಡರಗಿ, ಗದಗ**

Scan For Digital Colourful
HAMPI TIMES E-paper

ಅಷ್ಟರಲ್ಲಿ ಇತ್ತ ಪುರೋಹಿತರು ವೆಂಕಟೇಶ್ವರ ದೇವರ ಮತ್ತು ಶ್ರೀದೇವಿ ಭೂದೇವಿಯರ ಮೂರ್ತಿಗಳಿಗೆ ವಸ್ತ್ರ ಒಡವೆಗಳನ್ನು ತೊಡಿಸಿ ಅಲಂಕರಿಸಿ ಮನೆಯ ಒಳಗೆ ನಿಶ್ಚಿತ ಸ್ಥಳಗಳಲ್ಲಿ ಇರಿಸಿದ್ದರು. ಕಲ್ಯಾಣೋತ್ಸವಕ್ಕೆ ಸಿದ್ಧಪಡಿಸಲಾದ ಮಂಟಪದಲ್ಲಿ ವೆಂಕಟೇಶ್ವರ ಸ್ವಾಮಿಯ ಬಹುದೊಡ್ಡ ವಿಗ್ರಹವನ್ನು ಎಡ ಭಾಗದಲ್ಲಿ ಆಂಜನೇಯ ಮತ್ತು ಬಲ ಭಾಗದಲ್ಲಿ ಗರುಡನ ವಿಗ್ರಹಗಳನ್ನು ಇಡಲಾಗಿತ್ತು. ಪೂಜೆಗೆ ಬೇಕಾದ ಎಲ್ಲಾ ತಯಾರಿಗಳನ್ನು ಮಾಡಿದ್ದ ಪುರೋಹಿತರು ಮದುಮಗನಾದ ವೆಂಕಟೇಶ್ವರನ ಮೂರ್ತಿಯನ್ನು ತರಲು ಹೇಳಿದಾಗ ಹೆಂಗಳೆಯರು ಕೋಲಾಟವನ್ನು ಆಡುತ್ತಾ ವೆಂಕಟೇಶ್ವರ ಮೂರ್ತಿಯನ್ನು ಇರಿಸಿದ ಜಾಗಕ್ಕೆ ಪುರೋಹಿತರನ್ನು ಕರೆದೊಯ್ದರು.

ಪುರೋಹಿತರು ತಮ್ಮ ಕೈಯಲ್ಲಿ ವೆಂಕಟೇಶ್ವರ ಮೂರ್ತಿಯನ್ನು ಎತ್ತಿ ಹಿಡಿದು ನೃತ್ಯ ಮಾಡುತ್ತಾ ಹಾಡು,, ಕೋಲಾಟ, ನೃತ್ಯದ ಸಂಭ್ರಮದಲ್ಲಿ ವಿವಾಹ ಮಂಟಪಕ್ಕೆ ಕರೆತಂದು ಕೂರಿಸಿದರು.

ನಂತರ ವರನ (ವೆಂಕಟೇಶ್ವರ) ಮೂರ್ತಿಯನ್ನು ಕೂರಿಸಿಕೊಂಡು ಗಣಪತಿ ಪೂಜೆಯ ಮೂಲಕ ವಿವಾಹವಿಧಿಯನ್ನು ಶಾಸ್ತ್ರೋಕ್ತವಾಗಿ ಆರಂಭಿಸಿದರು. ನಂತರ ವೆಂಕಟೇಶ್ವರ ಸ್ವಾಮಿಗೆ ಕಂಕಣವನ್ನು ಕಟ್ಟಿದರು. ವಿವಾಹ ಕಾರ್ಯಕ್ರಮಕ್ಕೆ ಯಾವುದೇ ಅಡೆತಡೆ ಬರದೇ ಇರಲಿ ವೈವಾಹಿಕ ಜೀವನದಲ್ಲಿ ಕಂಕಣ ಬದ್ಧರಾಗಿ ನಡೆದುಕೊಳ್ಳಲು ಈ ಕಂಕಣದ ಅವಶ್ಯಕತೆ ಇದೆ ಎಂದು ಅವರು ವಿವರಿಸಿದರು. ನೆರೆದಿದ್ದ ಭಕ್ತರನ್ನು ಗಂಡಿನ ಮತ್ತು ಹೆಣ್ಣಿನ ಕಡೆಯವರಾಗಿ ವಿಂಗಡಿಸಿ ಹೆಣ್ಣನ್ನು ಕೊಟ್ಟು ತೆಗೆದುಕೊಳ್ಳುವ ವೀಳ್ಯದ ಶಾಸ್ತ್ರವನ್ನು ಪೂರೈಸಿದರು.

ತದನಂತರ ಒಬ್ಬರಾದ ನಂತರ ಒಬ್ಬರಂತೆ ಶ್ರೀದೇವಿ,ಭೂದೇವಿಯರ ವಿಗ್ರಹಗಳನ್ನು ಕೂಡ ಹೆಣ್ಣು ಮಕ್ಕಳ ಕೋಲಾಟ, ಅದ್ದೂರಿಯಾದ ಮೆರವಣಿಗೆಯಲ್ಲಿ ತಂದು ಶ್ರೀನಿವಾಸನ ವಿಗ್ರಹಕ್ಕೆ ಎದುರಾಗಿ ಕೂರಿಸಿ ಆ ವಿಗ್ರಹಗಳಿಗೂ ಕಂಕಣ ಧಾರಣೆ ಮಾಡಿದರು. ಹೀಗೆ ಕರೆತರುವಾಗ ಸಾಕಷ್ಟು ವಿಧದ ಸಿಹಿ ತಿಂಡಿಗಳು, ಹೂವು ಹಣ್ಣು ಫಲ ತಾಂಬೂಲಗಳು, ಕೊಬ್ಬರಿ ಬಟ್ಟಲು ಉತ್ತತ್ತಿಗಳು, ವೀಳ್ಯದೆಲೆ,ಅಡಿಕೆ ಬೆಟ್ಟಗಳು, ಜೀರಿಗೆ ಬೆಲ್ಲವನ್ನು ಕುಟ್ಟಿ ಸಿದ್ಧಪಡಿಸಿದ ಮೂರು ಉಂಡೆಗಳು, ತೆಂಗಿನಕಾಯಿ,ಎಳನೀರುಗಾಯಿ, ಹತ್ತು ಹಲವು ವಿಧದ ಸೌಮಾಂಗಲ್ಯದ ವಸ್ತುಗಳು( ಕಲಶ,ಕನ್ನಡಿ,ಕಾಡಿಗೆ, ಬಳೆ, ಪುಟ್ಟ ಬಾಚಣಿಕೆ,ಅರಿಶಿಣ,ಕುಂಕುಮ ಇತ್ಯಾದಿ) ತಾಳಿಯ ಬೊಟ್ಟು, ಚಿನ್ನದ ಸರ, ಬಳೆ, ಕುಂಕುಮ, ಅರಿಶಿಣ, ಅಕ್ಷತೆ ತುಂಬಿದ ವಿವಿಧ ಬುಟ್ಟಿಗಳನ್ನು ವಧುವಿನ ಬಂಧುಗಳು ಕಲ್ಯಾಣ ನೆರವೇರುವ ಮಂಟಪಕ್ಕೆ ತಂದು ಜೋಡಿಸಿದರು. ಈ ಮೊದಲೇ ಶ್ರೀನಿವಾಸ ದೇವರ ವಿಗ್ರಹದ ಮುಖಕ್ಕೆ



ಅಂತರ್ಪಟವನ್ನು ಹಿಡಿಯಲಾಗಿತ್ತು. ನಂತರ ಪುರೋಹಿತರ ಆಣತಿಯಂತೆ ವಧು–ವರರ ಪರವಾಗಿ ವರನ ಮತ್ತು ವಧುವಿನ ಕಡೆಯ ಜನರಿಗೆ ವಿವಾಹ ಶಾಸ್ತ್ರದ ಒಪ್ಪಿಗೆಯನ್ನು ಕೇಳಿ ಪರಸ್ಪರರು ವೀಳ್ಯವನ್ನು ಬದಲಾಯಿಸಿಕೊಂಡರು. ನಂತರ ಮಂತ್ರ ಪಠಣೆಯಾಗುತ್ತಿದ್ದಂತೆಯೇ ನೆರೆದ ಜನರ ಬಳಿ ಜೀರಿಗೆ ಬೆಲ್ಲದ ಉಂಡೆಗಳನ್ನು ಕೊಂಡೊಯ್ದು ಅವರೆಲ್ಲರೂ ಅದನ್ನು ಮುಟ್ಟಿ ನಮಸ್ಕರಿಸಿ ತಮ್ಮ ಒಪ್ಪಿಗೆಯನ್ನು ಸೂಚಿಸಿದ ನಂತರ
ಅಂತರ್ಪಟವನ್ನು ತೆಗೆದು ವೆಂಕಟೇಶ್ವರನ ವಿಗ್ರಹಕ್ಕೆ ಮತ್ತು ಎದುರಾಗಿ ಇರಿಸಲಾಗಿದ್ದ ಶ್ರೀದೇವಿ, ಭೂದೇವಿಯರ ವಿಗ್ರಹಗಳ ತಲೆಯ ಭಾಗಕ್ಕೆ ಜೀರಿಗೆ ಬೆಲ್ಲದ ಉಂಡೆಯನ್ನು ಒತ್ತಿ ಗುಡಜೀರಕ ಶಾಸ್ತ್ರವನ್ನು ಪೂರೈಸಲಾಯಿತು.

ವೈವಾಹಿಕ ಬದುಕಿನಲ್ಲಿ ಗೂಡ ಎಂದರೆ ಬೆಲ್ಲ ಮತ್ತು ಜೀರಕ ಎಂದರೆ ಜೀರಿಗೆಯ ಜೊತೆಗೆ ತುಸು ಉದ್ದಿನಬೇಳೆ ಬೆರೆಸಿದ್ದು ಜೀರಿಗೆಯ ಕಹಿ, ಉದ್ದಿನಬೇಳೆಯ ಜಿಗುಟುತನ, ಬೆಲ್ಲದ ಸಿಹಿಯಂತಹ ಘಟನೆಗಳು ನಮ್ಮ ಬಾಳಿನಲ್ಲಿ ಸಾಕಷ್ಟು ಬಾರಿ ನಾವು ಕಾಣಬಹುದಾಗಿದ್ದು ಆ ಎಲ್ಲವನ್ನು ದಂಪತಿಗಳು ಸಕಾರಾತ್ಮಕವಾಗಿ ಎದುರಿಸುವ ಮೂಲಕ ಪರಸ್ಪರರ ಬಾಂಧವ್ಯ ಮತ್ತಷ್ಟು ಹೆಚ್ಚಬೇಕು ಎಂಬುದು ಇದರ ತಾತ್ಪರ್ಯ. ವೈಜ್ಞಾನಿಕವಾಗಿ ಇದು ವಧು–ವರರ ನೆತ್ತಿಯಲ್ಲಿರುವ ಸುಷುಮ್ನ ನಾಡಿಯನ್ನು ಜಾಗೃತಗೊಳಿಸುತ್ತದೆ ಎಂಬ ನಂಬಿಕೆ ನಮ್ಮ ಹಿರಿಯರಲ್ಲಿ ಇದೆ.

ನಂತರ ಮುಂದಿನ ವಿಧಿ ವಿಧಾನಗಳು ನಡೆದು ಶ್ರೀದೇವಿ ಭೂದೇವಿಯರ ಮೂರ್ತಿಗಳನ್ನು ವೆಂಕಟೇಶ್ವರ ಸ್ವಾಮಿಯ ಎಡಬಲಗಳಲ್ಲಿ ಸ್ಥಾಪಿಸಲಾಯಿತು. ಸುಮಂಗಲಿಯರಿಗೆ ಅರಿಶಿನ ಕುಂಕುಮ ಹೂಗಳನ್ನು ನೀಡಿ ಎಲ್ಲರ ಬಳಿಯೂ ತಾಳಿಯನ್ನು ಕೊಂಡೊಯ್ದು

ಅದಕ್ಕೆ ಎಲ್ಲರೂ ನಮಿಸಿದ ನಂತರ ಎಲ್ಲರಿಗೂ ತಾಳಿಯನ್ನು ತೋರಿಸಿ ಸಾಮೂಹಿಕ ಒಪ್ಪಿಗೆಯನ್ನು ಪಡೆದು ಮೊದಲು ಶ್ರೀದೇವಿಗೆ, ನಂತರ ಭೂದೇವಿಗೆ ಮಾಂಗಲ್ಯಧಾರಣೆಯನ್ನು ಶ್ರೀನಿವಾಸನ ಪರವಾಗಿ ಪುರೋಹಿತರು ನಡೆಸುತ್ತಾರೆ.

ನಂತರ ಪುರೋಹಿತರು ನವದಂಪತಿಗಳಿಗೆ ಅಕ್ಷತಾರೋಪಣವನ್ನು ಮಾಡುತ್ತಾರೆ, ಹೀಗೆ ಮಾಡಿದಾಗ ದೇವರ ವಿಗ್ರಹದ ಹಿಂದೆ ನಿಂತು ವಿವಾಹ ಯೋಗ್ಯ ಗಂಡು ಹೆಣ್ಣು ಮಕ್ಕಳು, ಮಕ್ಕಳನ್ನು ಬಯಸುವ ದಂಪತಿಗಳು, ಮತ್ತಿತರ ಅಪೇಕ್ಷೆಗಳನ್ನು ಹೊಂದಿರುವವರು ಆ ಅಕ್ಷತೆಗಳನ್ನು ತಮ್ಮ ಮಡಿಲ ಹಾಸನ್ನು/ ಬಟ್ಟೆಯನ್ನು ಒಡ್ಡಿ ಪಡೆದುಕೊಳ್ಳುತ್ತಾರೆ. ಇದೀಗ ದಂಪತಿಗಳ ನಡುವೆ ಹಾರ ಬದಲಾವಣೆ ಕಾರ್ಯಕ್ರಮವನ್ನು ಪೂಜೆಗೆ ಸಂಕಲ್ಪಿಸಿದ ದಂಪತಿಗಳಿಗೆ ಪರಸ್ಪರ ಹಾಕಲು ಹೇಳುವುದರ ಜೊತೆಗೆ ಪುರೋಹಿತರು ಶ್ರೀನಿವಾಸ ಮತ್ತು ಆತನ ಇಬ್ಬರು ಪತ್ನಿಯರಿಗೆ ಹಾರ, ಚಿನ್ನದ ಸರವನ್ನು ತೊಡಿಸಿ

ಸಂಭ್ರಮದಿಂದ ದೇವರನ್ನು ಭಜಿಸುತ್ತಾರೆ. ತಂದಿರುವ ಎಲ್ಲಾ ಭಕ್ಷ ಭೋಜ್ಯಗಳನ್ನು, ಫಲ ತಾಂಬೂಲಗಳನ್ನು ದೇವರಿಗೆ ನೈವೇದ್ಯವಾಗಿ ಅರ್ಪಿಸಿ ಕಲ್ಯಾಣ ಕಾರ್ಯಕ್ರಮವನ್ನು ಸಾಂಗಗೊಳಿಸುತ್ತಾರೆ.

ನೋಡಿದಿರಾ ಸ್ನೇಹಿತರೆ ನಮ್ಮ ಭಾರತೀಯ ಸಂಪ್ರದಾಯದ ಐಸಿರಿಯನ್ನು!. ನಮ್ಮನ್ನು ಸಲಹುವ, ನಮ್ಮೆಲ್ಲ ಇಷ್ಟಾರ್ಥಗಳನ್ನು ಪೂರೈಸುವ ಸದಾ ನಮ್ಮನ್ನು ಪೊರೆಯುವ ಭಗವಂತನನ್ನು ಕೂಡ ನಮ್ಮ ಭಕ್ತರು ತಮ್ಮಿಷ್ಟದಂತೆ ಪೂಜಿಸಿ, ಭಜಿಸಿ, ಆರಾಧಿಸಿ, ಮದುವೆಯನ್ನು ಮಾಡಿ ಸಂಭ್ರಮಿಸುವ ಭಕ್ತ ಗಣ ನಮ್ಮಲ್ಲಿದೆ.

ನಿಜ ಕೆಲವರಿಗೆ ಇದರ ಅವಶ್ಯಕತೆ ಇದೆಯೇ? ಎಂಬ ಪ್ರಶ್ನೆ ಬರಬಹುದು.

ಎಲ್ಲವೂ ಅವರವರ ಭಾವಕ್ಕೆ ತೋಚಿದಂತೆ. ಕೆಲವರಿಗೆ ಒಳ್ಳೆಯ ಮನೆ, ಕಾರು, ಬಂಗಲೆ ಖರೀದಿಸುವ ಆಸೆ ಇದ್ದರೆ ಮತ್ತೆ ಕೆಲವರಿಗೆ ಒಳ್ಳೆಯ ವಿದ್ಯಾಭ್ಯಾಸ, ವಿದೇಶಿ ಜೀವನ, ಐಷಾರಾಮಿ ವಸ್ತುಗಳ ಮೇಲೆ ಆಸಕ್ತಿ ಇರುತ್ತದೆ. ಮತ್ತೆ ಕೆಲವರು ತೀರ್ಥಯಾತ್ರೆಗಳು ಭಜನೆ, ಪಾದಯಾತ್ರೆ,ಕಲ್ಯಾಣ ಸೇವೆ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಿ ತಮ್ಮ ಭಕ್ತಿಯ ಸೇವೆಯನ್ನು ಸಲ್ಲಿಸುವ ಮೂಲಕ ತೃಪ್ತಿಯನ್ನು ಹೊಂದುತ್ತಾರೆ. ಪ್ರತಿಯೊಬ್ಬರ ನಿಲುವು ವಿಭಿನ್ನವಾಗಿದ್ದರೂ ಅವರವರ ಆಸಕ್ತಿಯನ್ನು ಗೌರವಿಸುವುದು ವಿಹಿತ.

ಶಾಸ್ತ್ರೋಕ್ತವಾದ ವಿವಾಹ ಮಹೋತ್ಸವ, ಕಣ್ಮನ ಸೆಳೆಯುವ ಸುಂದರವಾದ ಹೂವಿನ ಅಲಂಕಾರ,ಬಗೆ ಬಗೆಯ ಭಕ್ಷ ಭೋಜ್ಯಗಳು ಭಕ್ತಿ ಭಾವ ಮತ್ತು ತುಂಬಿದ ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಜನರ ಸಡಗರ, ಅಚ್ಚುಕಟ್ಟಾದ ಊಟೋಪಚಾರ ಎಲ್ಲವೂ ಇಲ್ಲಿತ್ತು. ಶ್ರೀನಿವಾಸ ಕಲ್ಯಾಣವನ್ನು ಕಣ್ತುಂಬ ನೋಡಿ ಮನಸ್ಸು ತುಂಬಿ ಬಂತು, ಭಕ್ತಿಯ ಭಾವ ತಂತಾನೇ ಉಕ್ಕಿತು. ಪಂಚೇಂದ್ರಿಯಗಳಿಗೆ ಎಲ್ಲ ರೀತಿಯ ರಸಾಸ್ವಾದನೆ ಮಾಡಿದ ತೃಪ್ತಿ ನಮ್ಮದಾಗಿತ್ತು.

ಭಾರತೀಯ ಸಂಪ್ರದಾಯದ ಪುರಾತನವಾದ ಆದರೆ ಚಿರನೂತನವೂ ಆಗಿರುವ ಇಂತಹ ಕಾರ್ಯಕ್ರಮಗಳು ಮೈಮನಗಳ ಕೊಳೆಯನ್ನು ಕಳೆದು ಬದುಕಿನಲ್ಲಿ ಉತ್ಸಾಹವನ್ನು ತುಂಬುತ್ತವೆ..... ಏನಂತೀರಾ ಸ್ನೇಹಿತರೆ?




## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ | ಸಂವತ್ಸರ: ವಿಶ್ವವಸು

**04–06–2025 – ಬುಧವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉ.ಫಾಲ್ಗುಣಿ |
| ಯೋಗ | : ಹರ್ಷಣ |
| ಕರಣ | : ವಜ್ರ |
| ಸೂರ್ಯೋದಯ | : 06:41:53 |
| ಸೂರ್ಯಾಸ್ತ | : 19:08:54 |
| ರಾಹು ಕಾಲ | : 12:25–14:06 |
| ಯಮಘಂಡ ಕಾಲ | : 07:23–09:04 |
| ಗುಳಿಕ ಕಾಲ | : 10:45–12:25 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 03–06–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1598.60 ಅಡಿ |
| ಒಳ ಹರಿವು | 10989 ಕ್ಯುಸೆಕ್ |
| ಹೊರ ಹರಿವು | 245 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 19.774 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1577.59 ಅಡಿ |
| ಒಳ ಹರಿವು | 637 ಕ್ಯುಸೆಕ್ |
| ಹೊರ ಹರಿವು | 25 ಕ್ಯುಸೆಕ್ |
| ಸಾಮರ್ಥ್ಯ | 3.412 ಟಿಎಂಸಿ |




## ಮೀನುಗಾರಿಕೆ ಇಲಾಖೆ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

2025–26ನೇ ಸಾಲಿನ ರಾಜ್ಯ ವಲಯದ ಯೋಜನೆಗಳಾದ ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಉಚಿತ ವಿತರಣೆ ಮತ್ತು ಮೀನುಮರಿ ಖರೀದಿಗೆ ಸಹಾಯಧನ ವಿತರಣೆ ಯೋಜನೆಯಡಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಉಚಿತ ವಿತರಣೆ ಮತ್ತು ಮೀನುಮರಿ ಖರೀದಿಗೆ ಸಹಾಯಧನ ವಿತರಣೆ ಯೋಜನೆಯಡಿ ಮಹಿಳೆಯರಿಗೆ ಶೇ.33, ಪ.ಜಾತಿ/ಪ.ಪಂಗಡದವರಿಗೆ ಶೇ.24.1 ಮತ್ತು ಅಲ್ಪಸಂಖ್ಯಾತರಿಗೆ ಶೇ.15 ರ ಅನುಪಾತದಲ್ಲಿ ಗುರಿ ನಿಗದಿಯಾಗಿದ್ದು, ಯೋಜನೆಯಡಿ ಸರ್ಕಾರದ ಮಾರ್ಗಸೂಚಿಯನ್ವಯ ಲಭ್ಯವಿರುವ ಅನುದಾನದ ಮೇರೆಗೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು. ಕೊಪ್ಪಳ, ಕುಕನೂರು ಹಾಗೂ ಯಲಬುರ್ಗಾ ತಾಲ್ಲೂಕಿನ ಅರ್ಹ/ಆಸಕ್ತ ಮೀನುಗಾರರು ಹಾಗೂ ಮೀನುಗಾರಿಕೆ ಸಹಕಾರ ಸಂಘಗಳು ಸೌಲಭ್ಯಕ್ಕಾಗಿ ಜೂನ್ 30 ರೊಳಗೆ ಕೊಪ್ಪಳ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯಕ್ಕೆ ಸಂಪರ್ಕಿಸಬಹುದು ಎಂದು ಕೊಪ್ಪಳ ಮೀನುಗಾರಿಕೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

EVENT
Media
Coverage
Call us
94486 33038

# ಕೂಡ್ಲಿಗಿಯಲ್ಲಿ ಕೃಷಿಯೆ ಕಸುಬು

### ಶಾಸಕ ಎನ್.ಟಿ.ಶ್ರೀನಿವಾಸ ಹೇಳಿಕೆ | ರೇಷ್ಮ ಬೆಳೆಗಾರರಿಗೆ ಸೋಂಕು ನಿವಾರಕ ದ್ರಾವಣ ವಿತರಣೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ಕ್ಷೇತ್ರದಲ್ಲಿ ರೇಷ್ಮೆ ಬೆಳೆಗಾರರು ಹೆಚ್ಚಾಗಿದ್ದು, ರೇಷ್ಮೆ ಬೆಳೆ ಅಭಿವೃದ್ಧಿಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಜಿಪಂ ಅನುದಾನದಡಿ ಖರೀದಿಸಿದ್ದ ಸೋಂಕು ನಿವಾರಕ ದ್ರಾವಣಗಳನ್ನು ರೇಷ್ಮೆ ಬೆಳೆಗಾರರಿಗೆ ವಿತರಿಸಿ ಮಾತನಾಡಿದರು. ಕ್ಷೇತ್ರದಲ್ಲಿ 1,613 ಬೆಳೆಗಾರರು 3,126 ಎಕರೆಗಳಲ್ಲಿ ಹಿಪ್ಪುನೇರಳೆ ಕೃಷಿ ಮಾಡಲಾಗುತ್ತಿದ್ದಾರೆ. ಕೃಷಿಯೇ ಕಸುಬು ಆಗಿರುವ ಈ ತಾಲೂಕಿನಲ್ಲಿ ಅನೇಕರು ಕಳೆದ 30 ವರ್ಷಗಳಿಂದ ರೇಷ್ಮೆ ಕೃಷಿಯಲ್ಲಿ ಯಶಸ್ಸು ಕಂಡಿದ್ದಾರೆ. ಕ್ಷೇತ್ರದ ನಿಂಬಳಗೆರೆ ಗ್ರಾಮ ಸೇರಿದಂತೆ ಜಂಗಮಸೋವೇನಹಳ್ಳಿ, ಕೋಣನಹಳ್ಳಿ, ನಾಗರಕಟ್ಟೆ ಸೇರಿದಂತೆ 160 ಕ್ಕೂ ಹೆಚ್ಚು ಗ್ರಾಮಗಳಲ್ಲಿ ಈಗ ರೇಷ್ಮೆ ಬೆಳೆಗಾರರು ಇದ್ದು, ಉತ್ತಮ ಆದಾಯ ಕಂಡು ಕೊಂಡಿದ್ದಾರೆ. ಇದರಿಂದಾಗಿ ಸಂಭಂದಿಸಿದ ಸಚಿವರು ಹಾಗೂ ಮುಖ್ಯಮಂತ್ರಿಗಳ ಜತೆ ಚರ್ಚಿಸಿ ರೈತರಿಗೆ ಹೆಚ್ಚಿನ ಅನುದಾನ ನೀಡಿ ರೇಷ್ಮೆ ಬೆಳೆಗೆ ಪೂರಕವಾದ ಔಷಧ ಹಾಗೂ ರೇಷ್ಮೆ ಮನೆಗಳಿಗೆ ಅನುದಾನ ಒದಗಿಸಲು ಮನವಿ ಮಾಡಲಾಗುವುದು ಎಂದರು. ಇಲಾಖೆ ನೀಡಿದ ಈ ಔಷಧಗಳನ್ನು ಸಮರ್ಪಕವಾಗಿ ಉಪಯೋಗಿಸಿ ಉತ್ತಮ ಬೆಳೆ ಪಡೆಯಲು ಸೂಚಿಸಿದರು, ಕೃಷಿಕರು ಇಂಥಹ ಔಷಧಗಳನ್ನು ಯಾವುದೇ ಕಾರಣಕ್ಕೂ ಮಕ್ಕಳಿಗೆ ಸಿಗುವಂತೆ ಇಡಬೇಡಿ ಮುಂದೆ ಆಗುವ ಅನಾಹುತಗಳನ್ನು ತಪ್ಪಿಸಲು ರೈತರಿಗೆ ಜಾಗೃತಿ ಮೂಡಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ರೇಷ್ಮೆ ಇಲಾಖೆ ಉಪ ನಿರ್ದೇಶಕ ವಿ.ಸುಧೀರ್ ಮಾತನಾಡಿ, ಈಗಾಗಲೇ ತಾಲೂಕಿನಲ್ಲಿ ಅತಿ ಹೆಚ್ಚು ರೇಷ್ಮೆ ಬೆಳೆಗಾರರು ಇಲ್ಲಿ ಯಶ ಖಂಡಿದ್ದು, ಅನೇಕು ಯುವಕರು ಸಾಂಪ್ರದಾಯಿಕ ಕೃಷಿ ಕೈಬಿಟ್ಟು ರೇಷ್ಮೆ ಬೆಳೆದು ಅದಾಯ ದ್ವಿಗುಣ ಮಾಡಿದ್ದಾರೆ. ಈ ಮಣ್ಣಿನ ಗುಣದ ರೇಷ್ಮೆಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ ಹಾಗಾಗಿ ಪ್ರಸಕ್ತ ಸಾಲಿನಲ್ಲಿ 95 ರೇಷ್ಮೆ ಹುಳು ಸಾಕಣೆ ಮನೆಗಳಿಗೆ ಸಹಾಯಧನ ನೀಡಿದ್ದು, 86 ಕಡಿಮೆ ವೆಚ್ಚದ ಶೆಡ್ ಗಳಿಗೆ ಸಹಾಯಧನ ಒದಗಿಸಿ ನೇರವಾಗಿ ರೈತರ ಖಾತೆಗೆ ಸಹಾಯಧನ ನೀಡಲಾಗಿದೆ ಎಂದರು. ರೇಷ್ಮೆ ಸಹಾಯಕ ನಿರ್ದೇಶಕ ಕುಂಬಾರ್, ವಿಸ್ತರಣಾಧಿಕಾರಿ ಅಲ್ಲಾಭಕ್ಷಿ, ನರೇಶ್ ಸೇರಿದಂತೆ ಬೆಳೆಗಾರರಿದ್ದರು.

# ಗಾಳಿಗೆ ಬುಡಮೇಲಾದ ಮರ

### ಕಾಂಪೌಂಡ್ ಜಖಂ, ತಪ್ಪಿದ ಭಾರಿ ಅನಾಹುತ



**ಹೊಸಪೇಟೆಯ ಹೊಸ ಅಮರಾವತಿಯ ಸುರಭಿ ಕಲ್ಯಾಣ ಮಂಟಪದ ಬಳಿ ರಸ್ತೆಯಲ್ಲಿದ್ದ ಮರವೊಂದು ಸೋಮವಾರ ರಾತ್ರಿ ಬೀಸಿದ ಗಾಳಿಗೆ ಬುಡಮೇಲಾಗಿದ್ದು, ಖಾಲಿ ನಿವೇಶನದ ಕಾಂಪೌಂಡ್‌ಗೋಡೆ ಮೇಲೆ ಉರುಳಿದೆ. ಖಾಸಗಿ ಸಂಸ್ಥೆಯವರು ನೆಡುವ ಗಿಡಗಳು ಜನರಿಗೆ ಅಪಾಯ ತಂದೊಡ್ಡುವಂತೆ ಇರಬಾರದು. ಬಹುಕಾಲ ಬರುವ ಮತ್ತು ಗಾಳಿಗೆ ಬೀಳದ ಗಿಡಮರಗಳನ್ನು ಹಾಕಿದರೆ ಉತ್ತಮ. ವಾಹನ ಸಂಚಾರ ಮತ್ತು ವಾಹನಗಳು ನಿಲುಗಡೆ ಇಲ್ಲದ್ದರಿಂದ ಅನಾಹುತ ತಪ್ಪಿದೆ. ಗಿಡ ನೆಡುವವರು ಅವುಗಳ ನಿರ್ವಹಣೆಯತ್ತ ಗಮನಹರಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.**

### ರಾಬಕೋವಿ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಉಪ ವ್ಯವಸ್ಥಾಪಕ ಟಿ.ಮಲ್ಲಿಕಾರ್ಜುನ ಹೇಳಿಕೆ

# ಹಾಲು ಮಾನವನ ಆರೋಗ್ಯಕ್ಕೆ ಅತ್ಯಗತ್ಯ




**ಹಂಪಿ ಟೈಮ್ಸ್ ಬಳ್ಳಾರಿ**

ಆರೋಗ್ಯಕರ ಜೀವನ, ಆಹಾರ ಪದ್ಧತಿ ಮತ್ತು ಆಹಾರ ಉತ್ಪಾದನೆಯಲ್ಲಿ ಹಾಲಿನ ಉತ್ಪನ್ನಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಪ್ರತಿ ವರ್ಷ ಜೂ.01 ರಂದು ವಿಶ್ವ ಹಾಲು ದಿನ ಆಚರಣೆ ಮಾಡಲಾಗುತ್ತದೆ ಎಂದು ರಾಬಕೋವಿ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಉಪ ವ್ಯವಸ್ಥಾಪಕ ಟಿ.ಮಲ್ಲಿಕಾರ್ಜುನ ಅವರು ಹೇಳಿದರು.

ನಗರದ ಜಿಲ್ಲಾ ಆಸ್ಪತ್ರೆಯ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ವಿಶ್ವ ಹಾಲು ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಮಾನವನ ಜೀವನದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳು ಅಗತ್ಯವಾಗಿದೆ. ಹಾಲಿನಲ್ಲಿ ಕ್ಯಾಲಿಯಂ, ಪ್ರೋಟಿನ್, ವಿಟಮಿನ್–ಬಿ2 ಮುಂತಾದ ಪೋಷಕಾಂಶಗಳು ಅಡಗಿವೆ ಎಂದು ತಿಳಿಸಿದರು.

ಹಾಲು ಮತ್ತು ಹಾಲಿನ ಉತ್ಪನ್ನಗಳ ಮಹತ್ವ, ಸಮತೋಲನ, ಆಹಾರದಲ್ಲಿರುವ ಪೋಷಕಾಂಶಗಳು ಹಾಗೂ ಆರೋಗ್ಯಕ್ಕೆ ಅವುಗಳ ಮಹತ್ವ ಕುರಿತು ತಿಳಿಸುವುದು ವಿಶ್ವ ಹಾಲು ದಿನಾಚರಣೆಯ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ರಾಬಕೋವಿ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಮಾರುಕಟ್ಟೆ ವ್ಯವಸ್ಥಾಪಕ ಮೋಹನ್ ಎಲ್.ಶಿಂಧೆ ಮಾತನಾಡಿ, ವಿಶ್ವ ಹಾಲು ದಿನಾಚರಣೆ ಯನ್ನು ಪ್ರತಿ ವರ್ಷ ಜೂನ್ 1ನೇ ತಾರೀಖಿನಂದು ಆಚರಿಸಲು 2001 ರಲ್ಲಿ ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯು(ಎಫ್.ಎ.ಓ.) ಪ್ರಾರಂಭಿ ಸಿತು. ಡೇರಿ ಉದ್ಯಮಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಸಾಧ್ಯವಿರುವ ಉಪಕ್ರಮಗಳ ಬಗ್ಗೆ ಅರಿವು ಮೂಡಿಸಲು ಮತ್ತು ಬೆಂಬಲ ಒದಗಿಸಲು ಈ ದಿನದ ಉದ್ದೇಶವಾಗಿದೆ ಎಂದು ಅವರು ತಿಳಿಸಿದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಬಸರೆಡ್ಡಿ, ಜಿಲ್ಲಾ ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ ಕೆ.ವಿಶ್ವನಾಥ, ಶುಶ್ರೂಷಕ ಅಧೀಕ್ಷಕರಾದ ವಿಮಲಾಕ್ಷಿ, ಸಹಾಯಕ ಆಡಳಿತ ಅಧಿಕಾರಿ ರಜಿಯಾ ಬೇಗಂ, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯವಸ್ಥಾಪಕ(ಡೇರಿ) ಸಿದ್ದರಾಮಪ್ಪ ಶಿವರಾಯ ಕಣ್ಣೂರ, ಮಾರುಕಟ್ಟೆ ವ್ಯವಸ್ಥಾಪಕ ಮೋಹನ್ ಎಲ್.ಶಿಂಧೆ, ಸಹಾಯಕ ವ್ಯವಸ್ಥಾಪಕ ಎರಿಸ್ವಾಮಿ ರೆಡ್ಡಿ, ಉಪ ವ್ಯವಸ್ಥಾಪಕ ಟಿ.ಮಲ್ಲಿಕಾರ್ಜುನ, ಪ್ರಭಾರ ಉಪ ವ್ಯವಸ್ಥಾಪಕ ರಂಗಸ್ವಾಮಿ ಇತರರಿದ್ದರು.

# ಮುಂಗಾರು ಮಳೆ ಆರಂಭ ಹಾನಿ ತಡೆಗೆ ಕ್ರಮವಹಿಸಿ

**ಮೊದಲ ಪುಟದಿಂದ**

ಇತರೆ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ರಸ್ತೆಗೆ ಅಡ್ಡಲಾಗಿ ಇರುವ ಮರಗಳ ಕಟಾವಿಗೆ ಅರಣ್ಯ ಇಲಾಖೆಯೊಂದಿಗೆ ಸಮನ್ವಯತೆ ಸಾಧಿಸಬೇಕು ಎಂದು ತಿಳಿಸಿದ ಜಿಲ್ಲಾಧಿಕಾರಿಯವರು, ದುರಸ್ತಿ ವಿದ್ಯುತ್ ಕಂಬಗಳು ಸಹ ಕಂಡುಬಂದಲ್ಲಿ ಜೆಸ್ಕಾಂ ಇಲಾಖೆಯ ಗಮನಕ್ಕೆ ತರಬೇಕು ಎಂದು ಸೂಚಿಸಿದರು.

ಮಳೆಯಿಂದಾಗುವ ಹಾನಿ, ಲಘು ಪ್ರವಾಹ ಹಾಗೂ ಸಮಸ್ಯೆಗಳಿಗೆ ಸಾರ್ವಜನಿಕರಿಗೆ ಸಂಪರ್ಕಿಸಲು ಆಯಾ ತಾಲ್ಲೂಕು ತಹಶೀಲ್ದಾರರ ಕಚೇರಿ ಮತ್ತು ಮಹಾನಗರ ಪಾಲಿಕೆ ಕಚೇರಿಗಳಲ್ಲಿ ಸಹಾಯವಾಣಿ ಸಂಖ್ಯೆ ಆರಂಭಿಸಬೇಕು. ಇದಕ್ಕೆ ಪೂರಕವಾಗಿ ಅಧಿಕಾರಿಗಳನ್ನು ನೇಮಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಅವರು ನಿರ್ದೇಶನ ನೀಡಿದರು.

**ಮಳೆ–ಸಿಡಿಲು ಕುರಿತು ಜಾಗ್ರತೆ ಮೂಡಿಸಿ:**

ಜಿಲ್ಲೆಯಲ್ಲಿ ಕಳೆದ ತಿಂಗಳಿನಲ್ಲಿ ಸುರಿದ ಅತಿಯಾದ ಮಳೆ–ಸಿಡಿಲಿನಿಂದ 04 ಸಾವು ಪ್ರಕರಣ ವರದಿಯಾಗಿದ್ದು, ಈ ಕುರಿತು ಗ್ರಾಪಂ ಪಿಡಿಓ ಮತ್ತು ಸ್ಥಳೀಯ ಮುಖಂಡರ ಜೊತೆಗೂಡಿ ಗ್ರಾಮಸಭೆಗಳಲ್ಲಿ ಹೆಚ್ಚಿನ ಅರಿವು ಜಾಗೃತಿ ಮೂಡಿಸುವ ಕೆಲಸವಾಗಬೇಕು ಎಂದು ತಹಶೀಲ್ದಾರರಿಗೆ ಸೂಚಿಸಿದರು.

ಮಳೆಗಾಲದಲ್ಲಿ ಜೆಸ್ಕಾಂ ಸಂಬಂಧಿತ ದೂರುಗಳಿದ್ದಲ್ಲಿ ಸಹಾಯವಾಣಿ ಸಂಖ್ಯೆ 1912 ಕುರಿತು ಹೆಚ್ಚಿನ ಪ್ರಚಾರ ನೀಡಬೇಕು ಎಂದು ಜೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ಗ್ರಾಪಂ ವ್ಯಾಪ್ತಿಗಳಲ್ಲಿ ಕುಡಿಯುವ ನೀರು ಕಲುಷಿತಗೊಳ್ಳದಂತೆ ನೋಡಿಕೊಳ್ಳಬೇಕು. ಈ ಕುರಿತು ರಾಜ್ಯ ಮುಖ್ಯಮಂತ್ರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಅದರಿಂದಾಗುವ ಪ್ರಾಣಹಾನಿಗೆ ನೇರ ಅಧಿಕಾರಿಗಳು ಹೊಣೆಗಾರರಾಗುತ್ತಾರೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಎಚ್ಚರಿಸಿದರು.

ಜಿಲ್ಲೆಯಲ್ಲಿ ಮುಂಗಾರು ಮಳೆ ಉತ್ತಮವಾಗಿರುವುದರಿಂದ ಕೃಷಿ ಚಟುವಟಿಕೆಗಳು ಆರಂಭಗೊಳ್ಳುತ್ತಿವೆ. ಬೀಜ, ರಸಗೊಬ್ಬರ, ಕೀಟ ನಾಶಕ ಅಗತ್ಯ ಪ್ರಮಾಣದಲ್ಲಿ ದಾಸ್ತಾನು ಇಟ್ಟುಕೊಳ್ಳಬೇಕು ಎಂದು ಕೃಷಿ ಅಧಿಕಾರಿಗಳಿಗೆ ತಿಳಿಸಿದರು.

ಈ ಬಾರಿ ಜಿಲ್ಲೆಯಲ್ಲಿ ಬಿತ್ತನೆ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇದ್ದು, ಡಿಎಪಿ ಗೊಬ್ಬರದ ಬೇಡಿಕೆ ಹೆಚ್ಚಾಗಲಿದೆ. ಹೀಗಾಗಿ ಇದರ ಬದಲಾಗಿ ರೈತರಿಗೆ ಸಂಯುಕ್ತ ರಸಗೊಬ್ಬರ ಬಳಸಲು ಅಗತ್ಯ ಸಲಹೆಗಳನ್ನು ನೀಡಬೇಕು. ಈ ಕುರಿತು ರೈತ ಸಂಪರ್ಕ ಕೇಂದ್ರಗಳಲ್ಲಿ ರೈತರಿಗೆ ಮಾಹಿತಿ ನೀಡಬೇಕು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್, ಸಹಾಯಕ ಆಯುಕ್ತ ಪಿ.ಪ್ರಮೋದ್, ಜಂಟಿ ಕೃಷಿ ನಿರ್ದೇಶಕ ಸೋಮಸುಂದರ್, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಸಂತೋಷ್ ಸಪ್ಪಂಡಿ ಸೇರಿದಂತೆ ನೀರಾವರಿ, ಲೋಕೋಪಯೋಗಿ, ಆರ್‌ಡಿಪಿಆರ್, ಜೆಸ್ಕಾಂ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಎಲ್ಲಾ ತಾಲ್ಲೂಕು ತಹಶೀಲ್ದಾರರು ಭಾಗವಹಿಸಿದ್ದರು.

# ಮೀನುಗಾರಿಕೆ ಇಲಾಖೆ: ವಿವಿಧ ಯೋಜನೆಗಳಡಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

2025–26ನೇ ಸಾಲಿನ ರಾಜ್ಯ ವಲಯದ ಯೋಜನೆಗಳಾದ ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಉಚಿತ ವಿತರಣೆ ಮತ್ತು ಮೀನುಮರಿ ಖರೀದಿಗೆ ಸಹಾಯಧನ ವಿತರಣೆ ಯೋಜನೆಯಡಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಉಚಿತ ವಿತರಣೆ ಮತ್ತು ಮೀನುಮರಿ ಖರೀದಿಗೆ ಸಹಾಯಧನ ವಿತರಣೆ ಯೋಜನೆಯಡಿ ಮಹಿಳೆಯರಿಗೆ ಶೇ.33, ಪ.ಜಾತಿ/ಪ.ಪಂಗಡದವರಿಗೆ ಶೇ.24.1 ಮತ್ತು ಅಲ್ಪಸಂಖ್ಯಾತರಿಗೆ ಶೇ.15 ರ ಅನುಪಾತದಲ್ಲಿ ಗುರಿ ನಿಗದಿಯಾಗಿದ್ದು, ಯೋಜನೆಯಡಿ ಸರ್ಕಾರದ ಮಾರ್ಗಸೂಚಿಯನ್ವಯ ಲಭ್ಯವಿರುವ ಅನುದಾನದ ಮೇರೆಗೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು. ಕೊಪ್ಪಳ, ಕುಕನೂರು ಹಾಗೂ ಯಲಬುರ್ಗಾ ತಾಲ್ಲೂಕಿನ ಅರ್ಹ/ಆಸಕ್ತ ಮೀನುಗಾರರು ಹಾಗೂ ಮೀನುಗಾರಿಕೆ ಸಹಕಾರ ಸಂಘಗಳು ಸೌಲಭ್ಯಕ್ಕಾಗಿ ಜೂನ್ 30 ರೊಳಗೆ ಕೊಪ್ಪಳ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯಕ್ಕೆ ಸಂಪರ್ಕಿಸಬಹುದು ಎಂದು ಕೊಪ್ಪಳ ಮೀನುಗಾರಿಕೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಯು.ಪಿ.ಎಸ್.ಸಿ ನಾಗರಿಕ ಸೇವೆ ಮತ್ತು ಬ್ಯಾಂಕಿಂಗ್ ಪಿ.ಓ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2025–26ನೇ ಸಾಲಿನಲ್ಲಿ ಉಚಿತ ಪರೀಕ್ಷಾ ಪೂರ್ವ ತರಬೇತಿ ನೀಡುತ್ತಿದ್ದು, ಬಳ್ಳಾರಿ ಜಿಲ್ಲೆಯ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ) ಹಾಗೂ 3(ಬಿ) ಗಳಿಗೆ ಸೇರಿದ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನ ಜೂ.15 ಆಗಿದ್ದು, ಹೆಚ್ಚಿನ ವಿವರಗಳಿಗಾಗಿ ಇಲಾಖಾ ವೆಬ್‌ಸೈಟ್ https://bcwd.karnataka.gov.in ಅಥವಾ sevasindhuservices.karnataka.gov.in ಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಮೊಬೈಲ್ ಸಂಖ್ಯೆ 8050370006 (ಸಮಯ ಬೆಳಿಗ್ಗೆ 10 ರಿಂದ ಸಂಜೆ 5.30ರ ವರೆಗೆ, ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ) ಗೆ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.